ಯಃ ಸಕೃತ್ಸೇವ್ಯತೇ ಭೋಗಃ ಸ ಭೋಗೋ ಭೋಜನಾದಿಕಃ।
ಭೂಷಾದಿರುಪಭೋಗಃ ಸ್ಯಾತ್ಪುನಃಪುನ್ಯೇನ ಸೇವನಾತ್ ॥

— ಒಂದು ಸಲ ಸೇವಿಸಲ್ಪಡುವ ಭೋಜನಾದಿಗಳಿಗೆ ಭೋಗವೆಂದೂ ಮತ್ತೆ ಮತ್ತೆ ಸೇವಿಸಲ್ಪಡುವ ಆಭರಣಾದಿಗಳಿಗೆ ಉಪಭೋಗವೆಂದೂ ಹೆಸರು.

ಯಮಶ್ಚ ನಿಯಮಶ್ಚೇತಿ ದ್ವೌ ತ್ಯಾಜ್ಯೇ ವಸ್ತುನಿ ಸ್ಮೃತೌ ।
ಯಾವಜ್ಜೀವಂ ಯಮೋ ಜ್ಞೇಯಃ ಸಾವಧಿರ್ನಿಯಮಃ ಸ್ಮೃತಃ॥

— ತ್ಯಾಜ್ಯವಾದ ವಸ್ತುವಿನಲ್ಲಿ ಯಮವೆಂದೂ ನಿಯಮವೆಂದೂ ಎರಡು ವ್ರತಭೇದಗಳು ಹೇಳಲ್ಪಟ್ಟಿವೆ. ಮರಣಕಾಲದವರೆಗೂ ಧರಿಸುವ ವ್ರತಕ್ಕೆ ಯಮವೆಂದೂ ಕಾಲಪರಿಮಿತಿಯಿಂದ ಧರಿಸುವ ವ್ರತಕ್ಕೆ ನಿಯಮವೆಂದೂ ಹೆಸರು.

ಆ ವಿಶ್ವಭೂತಿ ಬ್ರಾಹ್ಮಣನು ಧಾನ್ಯಗಳನ್ನು ತೂರುವ ಸ್ಥಳಕ್ಕೆ ಹೋಗಿ, ಪಾರಿವಾಳದಂತೆ, ಧಾನ್ಯವನ್ನು ಸಂಗ್ರಹಿಸಿಕೊಂಡು ಬಂದು ಅದನ್ನು ಬೀಸಿ, ಆ ಹಿಟ್ಟನ್ನು ಕಲಸಿ ನಾಲ್ಕು ಭಕ್ಷ್ಯಗಳನ್ನು ಮಾಡಿ, ಒಂದನ್ನು ದೇವರ ಪೂಜೆಗೂ ಒಂದನ್ನು ತನಗೂ ಒಂದನ್ನು ತನ್ನ ಪತ್ನಿಗೂ ಒಂದನ್ನು ಅತಿಥಿಗೂ ಉಪಯೋಗಿಸುತ್ತಾ ಕಾಲವನ್ನು ಕಳೆಯುತ್ತಿದ್ದಾನೆ.

ಹೀಗಿರುವಾಗ ಒಂದಾನೊಂದು ದಿವಸ ಮಹಾಮಹಿಮರಾದ ಪಿಹಿತಾಸ್ರವ ಮುನೀಶ್ವರರು ಆಹಾರನಿಮಿತ್ತವಾಗಿ ಆ ವಿಶ್ವಭೂತಿಯ ಮನೆಗೆ ಬಂದರು. ಅವನು ಅತ್ಯಾನಂದದಿಂದ ಶಾಸ್ತ್ರವಿಧಿಗನುಸಾರವಾಗಿ ಅವರಿಗೆ ಆ ಅತಿಥಿಭಾಗವನ್ನು ಕೊಟ್ಟನು. ಆದರಿಂದ ಅವರಿಗೆ ತೃಪ್ತಿಯಾಗದಿದ್ದುದನ್ನು ತಿಳಿದು ತನ್ನ ಭಾಗವನ್ನೂ ಕೊಟ್ಟನು. ಆದರಿಂದಲೂ ಅವರಿಗೆ ತೃಪ್ತಿಯುಂಟಾಗಲಿಲ್ಲ. ಆಗ ವಿಶ್ವಭೂತಿಯು ತನ್ನ ಪತ್ನಿಯ ಮುಖವನ್ನು ನೋಡಿದನು. ಇಂಗಿತಜ್ಞಳಾದ ಆಕೆಯು 'ಪತಿದೇವಾ! ನಿನ್ನ ಅನುಗ್ರಹದಿಂದ ನಾನು ಧನ್ಯಳಾಗುವೆನು. ನನಗೋಸ್ಕರ ತೆಗೆದಿಟ್ಟಿರುವ ಭಾಗವನ್ನೂ ಕೊಡು. ನನಗೂ ಪುಣ್ಯವ ಸಂಘಟಿಸಲಿ' ಎಂದಳು. ವಿಶ್ವಭೂತಿಯು ಆಕೆಯ ಭಾಗವನ್ನೂ ಕೊಟ್ಟನು.

ವಶ್ಯಾಃ ಸುತಾ ವೃತ್ತಿಕರೀ ಚ ವಿದ್ಯಾ ನೀರೋಗತಾ ಸಜ್ಜನಸಂಗತಿಶ್ಚ ।
ಇಷ್ಟಾ ಚ ಭಾರ್ಯಾ ವಶವರ್ತಿನೀ ಚ ದುಃಖಸ್ಯ
ಮೂಲೋದ್ಧರಣಾನಿ ಪಂಚ ॥

— ಅಧೀನರಾದ ಮಕ್ಕಳು, ಜೀವನಕ್ಕೆ ಅನುಕೂಲವಾದ ವಿದ್ಯೆ, ರೋಗವಿಲ್ಲದಿರುವಿಕೆ, ಸಜ್ಜನರ ಸಹವಾಸ, ಪ್ರಿಯಳೂ ಅಧೀನಳೂ ಆದ ಹೆಂಡತಿ ಈ ಐದು ಸಾಧನಗಳು ದುಃಖದ ಮೂಲವನ್ನು ನಾಶಮಾಡತಕ್ಕವು.

ವಿಶ್ವಭೂತಿಯು ಆ ಮೂರು ಭಾಗಗಳನ್ನೂ ಭಕ್ತಿಪೂರ್ವಕವಾಗಿ ಕೊಟ್ಟ ಮೇಲೆ, ಆ ಮುನೀಶ್ವರರಿಗೆ ಉದರ ಪೂರ್ತಿಯಾಗಿ ನಿರಂತರಾಯವಾಗಿ ಆಹಾರವಾಯಿತು. ಆದರಿಂದ ದೇವತೆಗಳೂ ಕೂಡ ಸಂತುಷ್ಟರಾಗಿ ರತ್ನವೃಷ್ಟಿ, ಪುಷ್ಪವೃಷ್ಟಿ, ಸುಗಂಧಮಾರುತ, ದೇವದುಂದುಭಿ, ಸಾಧುವಾದ (ಚೆನ್ನಾದುದು) ಗಳೆಂಬ ಪಂಚಾಶ್ಚರ್ಯಗಳನ್ನು ಮಾಡಿದರು. ಅದನ್ನು ನೋಡಿ ಇತರ ಬ್ರಾಹ್ಮಣರು 'ಇದು ಬಹು ಸುವರ್ಣಯಜ್ಞದ ಫಲ'ವೆಂದು ದೊರೆಗೆ ಹೇಳಿದರು. ದೊರೆಯು ಬಹು ಸಂತುಷ್ಟನಾದನು. ಬಳಿಕ ಆ ಬ್ರಾಹ್ಮಣರು ಆ ರತ್ನಗಳನ್ನು ತೆಗೆದುಕೊಳ್ಳುವುದಕ್ಕಾಗಿ ನಾನು ತಾನೆಂದು ಆತುರದಿಂದ ಕೈ ಹಾಕುವುದಕ್ಕೆ ಹೋದಾಗ ಅವು ಕೆಂಡಗಳಾಗಿ ಪರಿಣಮಿಸಿದುವು. ಆಗ ಕೆಲವರು ಧಾರ್ಮಿಕರಾದ ವಿವೇಕಿಗಳು ಅದು ದೊರೆಯ ಬಹು ಸುವರ್ಣಯಜ್ಞದ ಫಲವಲ್ಲವೆಂದೂ ವಿಶ್ವಭೂತಿಯು ಮುನೀಶ್ವರರಿಗೆ ಮಾಡಿದ ಆಹಾರದಾನದ ಫಲವೆಂದೂ ಹೇಳಿದರು. ಆ ಮಾತನ್ನು ಕೇಳಿ ಗುಣಪಕ್ಷಪಾತಿಯಾದ ದೊರೆಯು ಅದು ಸತ್ಯವೆಂದು ಬಗೆದು, ಮುನಿದಾನದ ಮಹಿಮೆಯನ್ನು ಪರಿಭಾವಿಸಿ, ಕರ್ಮೋಪಶಮವುಳ್ಳವನಾಗಿ ತನ್ನ ಮನಸ್ಸಿನಲ್ಲಿ ವಿಚಾರ ಮಾಡುತ್ತಾನೆ—

ಆರ್ತ ರೌದ್ರಧ್ಯಾನಪರರಾದ ಗೃಹಸ್ಥರು ಉತ್ತಮವರ್ಣದವರಾದರೂ ದಾನಕ್ಕೆ ಯೋಗ್ಯರಲ್ಲ, ಅಂಥವರಿಗೆ ಶುಭಭಾವನೆಯಿರುವುದಿಲ್ಲ.

ನೋ ಶೀಲಂ ಪರಿಪಾಲಯಂತಿ ಗೃಹಿಣಸ್ತಪ್ತುಂ ತಪೋ ನ ಕ್ಷಮಾಃ ।
ಆರ್ತಧ್ಯಾನನಿರಾಕೃತೋಜ್ಜ್ವಲಧಿಯಾಂ ತೇಷಾಂ ನ ಸದ್ಭಾವನಾ ॥
ಇತ್ಯೇವಂ ನಿಪುಣೇನ ಹಂತ ಮನಸಾ ಸಮ್ಯಙ್ಮಯಾ ನಿಶ್ಚಿತಂ ।
ನೋತ್ತಾರೋ ಭವಕೂಪತೋಽಸ್ತಿ ಸುದೃಢೋ ದಾನಾವಲಂಬಾತ್ಪರಃ॥

— ಗೃಹಸ್ಥರು ಶೀಲವನ್ನು ಪಾಲಿಸುವುದಿಲ್ಲ. ತಪವನ್ನು ಮಾಡಲು ಸಮರ್ಥರಾಗಿಲ್ಲ. ಅವರ ತೀವ್ರವಾದ ಬುದ್ಧಿಯು ಆರ್ತಧ್ಯಾನದಿಂದ ನಷ್ಟವಾಗಿರುವುದರಿಂದ ಅವರಲ್ಲಿ ಒಳ್ಳೆಯ ಭಾವನೆಯಿಲ್ಲ. ಈ ಪ್ರಕಾರವಾಗಿ ನಾನು ನಿಶ್ಚಲಮನದಿಂದ ನಿಶ್ಚಯಿಸಿದೆನು. ದಾನವೆಂಬ ಆಶ್ರಯವನ್ನು ಬಿಟ್ಟರೆ, ಆತ್ಮನನ್ನು ಭವವೆಂಬ ಬಾವಿಯಿಂದ ಮೇಲಕ್ಕೆತ್ತುವ ದೃಢವಾದ ಆಶ್ರಯವು ಮತ್ತೊಂದಿಲ್ಲ.

ಮುನಿಗಳಿಗೆ ಆಹಾರದಾನವನ್ನು ಮಾಡಬೇಕು. ಅವರೇ ಮುಕ್ತಿಗೆ ಕಾರಣರಾಗಿರುತ್ತಾರೆ.

ಸಂತಃ ಸರ್ವಸುರಾಸುರೇಂದ್ರಮಹಿತಂ ಮುಕ್ತೇಃ ಪರಂ ಕಾರಣಂ ।
ರತ್ನಾನಾಂ ದಧತಿ ತ್ರಯಂ ತ್ರಿಭುವನಪ್ರದ್ಯೋತಿ ಕಾಯೇ ಸತಿ ॥
ವೃತ್ತಿಸ್ತಸ್ಯ ಯದನ್ನತಃ ಪರಮಯಾ ಭಕ್ತ್ಯಾರ್ಪಿತಾಜ್ಜಾಯತೇ ।
ತೇಷಾಂ ಸದ್ಗೃಹಮೇಧಿನಾಂ ಗುಣವತಾಂ ಧರ್ಮೋ ನ ಕಸ್ಯ ಪ್ರಿಯಃ ॥

— ಸತ್ಪುರುಷರು ಸಮಸ್ತ ಸುರೇಂದ್ರರಿಂದಲೂ ಅಸುರೇಂದ್ರರಿಂದಲೂ ಪೂಜಿಸಲ್ಪಟ್ಟಿದ್ದೂ ಮುಕ್ತಿಗೆ ಮುಖ್ಯಕಾರಣವೂ ಮೂರು ಲೋಕವನ್ನು ಬೆಳಗುವುದೂ ಆದ ಸಮ್ಯಗ್ದರ್ಶನ ಜ್ಞಾನ ಚಾರಿತ್ರ ರೂಪ ರತ್ನತ್ರಯವನ್ನು ದೇಹವಿದ್ದರೆ ತಾನೇ ಧರಿಸುತ್ತಾರೆ ? ಆ ದೇಹದ ಇರುವಿಕೆಯಾದರೋ ಪರಮ ಭಕ್ತಿಯಿಂದ ಕೊಡಲ್ಪಟ್ಟ ಗುಣವಂತರಾದ ಸದ್ಗೃಹಸ್ಥರ ಅನ್ನದಿಂದುಂಟಾಗುವುದು. ಆತ್ಮಹಿತಕಾರಿಯಾದ ಧರ್ಮವು ಯಾರಿಗೆ ಪ್ರಿಯವಲ್ಲ ?'

ಬಳಿಕ ದೊರೆಯು ಕೈಗಳನ್ನು ಮುಗಿದುಕೊಂಡು ವಿಶ್ವಭೂತಿಬ್ರಾಹ್ಮಣನನ್ನು ಕುರಿತು 'ಅಯ್ಯಾ ವಿಶ್ವಭೂತಿಯೇ ! ನೀನು ಮುನೀಶ್ವರರಿಗೆ ಕೊಟ್ಟ ಆಹಾರದಾನದ ಅರ್ಧ ಫಲವನ್ನು ನನಗೆ ಕೊಡು. ನಾನು ಮಾಡಿದ ಸುವರ್ಣ ಯಜ್ಞದ ಅರ್ಧಫಲವನ್ನು ನಿನಗೆ ಕೊಡುವೆನು' ಎಂದನು. ಆ ಮಾತನ್ನು ಕೇಳಿ ವಿಶ್ವಭೂತಿಬ್ರಾಹ್ಮಣನು ದೊರೆಯನ್ನು ಕುರಿತು 'ಪ್ರಭುವೇ ! ಸತ್ಪುರುಷನು ದಾರಿದ್ರ್ಯ ದುಃಖದಿಂದ ಪೀಡಿತನಾಗಿದ್ದರೂ ನ್ಯಾಯವನ್ನೂ ಧರ್ಮವನ್ನೂ ಎಂದಿಗೂ ಬಿಡಲಾರ. ಸಿರಿತನ, ಬಡತನಗಳು ಸ್ಥಿರಗಳಲ್ಲ. ಧರ್ಮವು ಸ್ಥಿರವಾದುದು. ಸ್ವರ್ಗ ಮೋಕ್ಷದಾಯಕವಾದ ಆಹಾರಾಭಯ ಭೈಷಜ್ಯ,

ಶಾಸ್ತ್ರದಾನರೂಪವಾದ ಪವಿತ್ರ ಧರ್ಮವನ್ನು ದ್ರವ್ಯಕ್ಕೋಸ್ಕರ ವಿವೇಕಿಯು ಮಾರುವನೇನು ?' ಎಂದು ಉತ್ತರವನ್ನಿತ್ತನು.

ಅನಂತರದಲ್ಲಿ ದೊರೆಯು ಮುನಿವರ್ಯರ ಸಾನ್ನಿಧ್ಯಕ್ಕೆ ಹೋಗಿ, ಗೃಹಸ್ಥನು ಆಹಾರಾಭಯ ಭೈಷಜ್ಯ ಶಾಸ್ತ್ರದಾನಗಳನ್ನು ಮಾಡುವುದೇಕೆಂದು ಪ್ರಶ್ನೆ ಮಾಡಿದನು. ಅದಕ್ಕೆ ಉತ್ತರವಾಗಿ ಮುನೀಶ್ವರರು ಆ ದಾನಗಳ ಮಹತ್ವವನ್ನು ನಿರೂಪಿಸುತ್ತಾರೆ.

'ಅಯ್ಯಾ ದೊರೆಯೇ ! ಧರ್ಮಸಾಧನೆಗೆ ಶರೀರವು ಮುಖ್ಯಕಾರಣವಾಗಿರುತ್ತದೆ. ಅಂತಹ ಶರೀರದ ಇರುವಿಕೆಗೆ ಆಹಾರವು ಕಾರಣವಾಗಿರುತ್ತದೆ. ಆದುದರಿಂದ ಆಹಾರದಾನವು ಸಮಸ್ತದಾನಗಳಲ್ಲಿ ಶ್ರೇಷ್ಠವಾದುದು. ಆಹಾರ ದಾನಕ್ಕೆ ಸರಿದೂಗುವ ದಾನವಿಲ್ಲ.

ತುರಗಶತಸಹಸ್ರಂ ಗೋಕುಲಂ ಭೂಮಿದಾನಂ ।
ಕನಕರಜತಪಾತ್ರಂ ಮೇದಿನೀ ಸಾಗರಾಂತಾ ॥
ಸುರಯುವತಿಸಮಾನಂ ಕೋಟಿಕನ್ಯಾಪ್ರದಾನಂ ।
ನ ಹಿ ಭವತಿ ಜಗತ್ಯಾಂ ಚಾನ್ನದಾನೇನ ತುಲ್ಯಂ ॥

— ಜಗತ್ತಿನಲ್ಲಿ ಲಕ್ಷ ಕುದುರೆಗಳ ದಾನವೂ ಗೋಸಮೂಹ ದಾನವೂ ಭೂಮಿ ದಾನವೂ ಬೆಳ್ಳಿ ಬಂಗಾರದ ಪಾತ್ರೆಗಳ ದಾನವೂ ಸಮುದ್ರದವರೆಗಿರುವ ಪೃಥ್ವಿಯ ದಾನವೂ ದೇವಸ್ತ್ರೀಯರಿಗೆ ಸಮಾನರಾದ ಕೋಟಿ ಕನ್ಯೆಯರ ದಾನವೂ ಅನ್ನದಾನಕ್ಕೆ ಸಮಾನಗಳಾಗುವುದಿಲ್ಲ.

ಶರೀರಕ್ಕೆ ರೋಗವು ಪ್ರಾಪ್ತವಾದರೆ ಜಪ ತಪ ಮೊದಲಾದ ಧಾರ್ಮಿಕ ಕಾರ್ಯಗಳನ್ನು ಮಾಡುವುದಕ್ಕೆ ಅಡ್ಡಿಯಾಗುವುದರಿಂದ ಔಷಧದಾನವನ್ನು ಮಾಡಿ, ರೋಗವನ್ನು ದೂರಮಾಡುವುದು ಭೈಷಜ್ಯದಾನವಾಗಿರುತ್ತದೆ. ಮುನಿಯಾದರೂ ತಪಸ್ಸಿನಿಂದ ಕರ್ಮಕ್ಷಯವನ್ನು ಮಾಡಿ ಮೋಕ್ಷವನ್ನು ಹೊಂದಬೇಕಾದರೆ, ಅವನಿಗೆ ರೋಗರಹಿತವಾದ ಶರೀರವು ಬೇಕು. ಆದುದರಿಂದ ಆಹಾರದಾನದಂತೆ ಔಷಧದಾನವನ್ನೂ ಮಾಡುವುದು ಮನುಷ್ಯನ ಕರ್ತವ್ಯವಾಗಿದೆ.

ರೋಗಿಭ್ಯೋ ಭೇಷಜಂ ದೇಯಂ ರೋಗಾ ದೇಹವಿನಾಶಕಾಃ ।
ದೇಹನಾಶೇ ಕುತೋ ಜ್ಞಾನಂ ಜ್ಞಾನಾಭಾವೇ ನ ನಿರ್ವೃತಿಃ ॥

— ರೋಗಿಗಳಿಗೆ ಔಷಧವನ್ನು ಕೊಡಬೇಕು. ರೋಗಗಳು ಶರೀರವನ್ನು ವಿನಾಶಮಾಡುವುವು. ಶರೀರವು ನಾಶವಾದರೆ ಜ್ಞಾನವು ಎಲ್ಲಿಂದ ಬರುವುದು? ಜ್ಞಾನವಿಲ್ಲದಿದ್ದರೆ ಮೋಕ್ಷವಿಲ್ಲ.

ದ್ವಾರಾವತಿಯಲ್ಲಿ ವಾಸುದೇವನು ಮುನಿವರ್ಯರಿಗೆ ಔಷಧದಾನವನ್ನು ಮಾಡಿದುದರಿಂದ ತೀರ್ಥಕರನಾಮವೆಂಬ ಸರ್ವೋತ್ಕೃಷ್ಟವಾದ ಪುಣ್ಯಕರ್ಮವನ್ನು ಉಪಾರ್ಜಿಸಿ, ಮುಂದೆ ಮಹಾಪದ್ಮ ತೀರ್ಥಂಕರನಾಗಿ ಹುಟ್ಟುವವನಾಗಿದ್ದಾನೆ.

ಹೀಗೆ ಅಭಯದಾನವನ್ನೂ ಮಾಡಬೇಕು. ಒಂದು ಪ್ರಾಣಿಯನ್ನು ರಕ್ಷಿಸುವವನು ಜನ್ಮಾಂತರದಲ್ಲಿ ಯಾವಾಗಲೂ ನಿರ್ಭಯನಾಗಿರುತ್ತಾನೆ. ಅಂದಮೇಲೆ ಅನೇಕ ಜೀವಗಳಿಗೆ ಅಭಯದಾನವನ್ನು ಮಾಡಿದರೆ ಹೇಳುವುದೇನು ?

ವಿಧೇಯಂ ಸರ್ವದಾ ದಾನಮಭಯಂ ಸರ್ವದೇಹಿನಾಂ ।
ಯತೋನ್ಯಸ್ಮಿನ್ ಭವೇ ಜೀವೋ ನಿರ್ಭಯೋಭಯದಾನತಃ ॥

— ಯಾವಾಗಲೂ ಸಕಲಪ್ರಾಣಿಗಳಿಗೆ ಅಭಯದಾನವನ್ನು ಮಾಡಬೇಕು. ಆದರಿಂದ ಮುಂದಿನ ಭವದಲ್ಲಿ ಆ ದಾನಿಯು ನಿರ್ಭಯನಾಗುವನು.

ಯೋ ದದ್ಯಾತ್ಕಾಂಚನಂ ಮೇರುಂ ಕೃತ್ಸ್ನಾಂ ಚಾಪಿ ವಸುಂಧರಾಂ ।
ಏಕಸ್ಯ ಜೀವಿತಂ ದದ್ಯಾತ್ಫಲೇನ ನ ಸಮಂ ಭವೇತ್ ॥

— ಬಂಗಾರದ ಮೇರುಪರ್ವತವನ್ನು ದಾನಮಾಡಿದರೂ ಸಮಸ್ತ ಪೃಥ್ವಿಯನ್ನು ದಾನಮಾಡಿದರೂ ಆ ದಾನಗಳ ಫಲವು ಒಂದು ಪ್ರಾಣಿಯ ಪ್ರಾಣದಾನದ ಫಲಕ್ಕೆ ಸಮಾನವಾಗಲಾರದು.

ಗೋದಾನಂ ಸ್ವರ್ಣದಾನಂ ಚ ಭೂಮಿದಾನಂ ತಥೈವ ಚ ।
ಏಕಸ್ಯ ಜೀವಿತಂ ದದ್ಯಾತ್ಫಲೇನ ನ ಸಮಂ ಭವೇತ್ ॥

— ಗೋದಾನ, ಸುವರ್ಣದಾನ, ಭೂಮಿದಾನಗಳ ಫಲವು ಒಂದು ಪ್ರಾಣಿಯ ಪ್ರಾಣದಾನದ ಫಲಕ್ಕೆ ಸಮಾನವಾಗಲಾರದು.

ಈ ಸಂದರ್ಭಕ್ಕೆ ಯಮಪಾಲನೆಂಬ ಚಂಡಾಲನ ಕಥೆಯೂ ಮೃಗಸೇನನೆಂಬ ಬೆಸ್ತರವನ ಕಥೆಯೂ ಉಪಯುಕ್ತವಾಗಿರುತ್ತವೆ—

ಯಮಪಾಲನೆಂಬ ಚಂಡಾಲನೊಬ್ಬನಿಗೆ ಅಕಸ್ಮಾತ್–ಕಾಲಲಬ್ಧಿಯಿಂದ ಓರ್ವ ಮುನೀಶ್ವರರ ಸಮಾಗಮವು ದೊರೆತು, ಅವರಲ್ಲಿ ಧರ್ಮೋಪದೇಶವನ್ನು ಕೇಳಿ, ಅಹಿಂಸಾ ಧರ್ಮದ ಮಹಿಮೆಯನ್ನು ತಿಳಿದು, ತನ್ನ ಕುಲವೃತ್ತಿಯಾದ ಹಿಂಸೆಯನ್ನು ಯಾವಾಗಲೂ ಬಿಡಲು ಸಾಧ್ಯವಿಲ್ಲದಿದ್ದರೂ ಪರ್ವದಿನಗಳಲ್ಲಾದರೂ ಬಿಡಬೇಕೆಂದು ಸಂಕಲ್ಪಿಸಿ, ಹಾಗೆ ಆ ಮುನೀಶ್ವರರಲ್ಲಿ ನಿಯಮವನ್ನು ಕೈಗೊಂಡನು. ಒಂದಾನೊಂದು ಕಾಲದಲ್ಲಿ ಪರ್ವದಿನದಲ್ಲಿ ಯಾರೂ ತನ್ನ ರಾಜ್ಯದಲ್ಲಿ ಪ್ರಾಣಿಹಿಂಸೆಯನ್ನು ಮಾಡಬಾರದೆಂದೂ ಮಾಡಿದರೆ ಶಿಕ್ಷೆಗೊಳಗಾಗುವರೆಂದೂ ಆ ನಾಡಿನ ದೊರೆಯು ಆಜ್ಞೆಮಾಡಿದನು. ಆದರೆ ಆ ದೊರೆಯ ಮಗನು ಮಾಂಸವ್ಯಸನಿಯಾಗಿದ್ದು ಒಂದು ಪರ್ವದಿನದಲ್ಲಿ ರಾಜೋದ್ಯಾನಕ್ಕೆ ಹೋಗಿ ಯಾರೂ ಕಾಣದಂತೆ ಒಂದು ಮೃಗವನ್ನು ಕೊಂದು ತಿಂದನು. ಸ್ವಲ್ಪ ಸಮಯದ ಮೇಲೆ ಆ ಮೃಗದ ಕಾಲುಗಳೂ ಮೂಳೆಗಳೂ ಉದ್ಯಾನಪಾಲಕರಿಗೆ ಸಿಕ್ಕಿ ಆ ವಿಷಯವನ್ನು ದೊರೆಗೆ ತಿಳಿಸಿದರು. ದೊರೆಯು ಹಿಂಸಕನನ್ನು ಹುಡುಕುವಂತೆ ತನ್ನ ಭೃತ್ಯರಿಗೆ ಅಪ್ಪಣೆ ಮಾಡಿದನು. ಅವರು ದೊರೆಯ ಮಗನೇ ಆ ಮೃಗವನ್ನು ಕೊಂದವನೆಂದು ಕಂಡುಹಿಡಿದು ಆ ವಿಷಯವನ್ನು ದೊರೆಗೆ ತಿಳಿಸಿದರು. ನಿಷ್ಪಕ್ಷಪಾತಿಯೂ ನ್ಯಾಯಪಕ್ಷಪಾತಿಯೂ ಆದ ದೊರೆಯು ತನ್ನ ಪುತ್ರನು ತಪ್ಪನ್ನು ಮಾಡಿದರೂ ಮನ್ನಿಸುವುದಿಲ್ಲ.

ಶ್ರೀರಾಮಚಂದ್ರರು ಲೋಕಾಪವಾದಕ್ಕಂಜಿ ಪವಿತ್ರಮೂರ್ತಿಯಾದ ತುಂಬಿದ ಗರ್ಭಿಣಿಯಾದ ಶ್ರೀ ಸೀತಾದೇವಿಯವರನ್ನು ತ್ಯಜಿಸಿ, ಕಾಡುಪಾಲು ಮಾಡಲಿಲ್ಲವೇ ?

ಆ ದೊರೆಯು ತನ್ನ ಮಗನೇ ತಪ್ಪನ್ನು ಮಾಡಿದವನೆಂದು ನಿರ್ಧಾರವಾದ ಮೇಲೆ, ಅವನಿಗೆ ಮರಣದಂಡನೆಯನ್ನು ವಿಧಿಸಿದನು. ಅಲ್ಲಿ ಆ ಶಿಕ್ಷೆಯನ್ನು ಮಾಡುವುದು ಅಂದರೆ ಗಲ್ಲಿಗೇರಿಸುವುದು ಆ ಯಮಪಾಲ ಚಾಂಡಾಲನ ಕೆಲಸವಾಗಿದ್ದಿತು. ರಾಜಪುತ್ರನನ್ನು ಗಲ್ಲಿಗೇರಿಸುವ ಸಂದರ್ಭವು ಬಂದೊದಗಿತು.

ಆದರೆ ಅಂದು ಪರ್ವದಿನ. ರಾಜದೂತರು ಯಮಪಾಲನನ್ನು ಕರೆಯುವುದಕ್ಕಾಗಿ ಬಂದರು. ಆಗ ಯಮಪಾಲನು ವ್ರತಭಂಗಭಯದಿಂದ ಮನೆಯೊಳಗಿದ್ದೂ ತನ್ನ ಹೆಂಡತಿಯಿಂದ ಇಲ್ಲವೆನ್ನಿಸಿದನು. ಆಗ ರಾಜದೂತರು 'ದೊರೆಯ ಮಗನು ಹೇರಳವಾಗಿ ಆಭರಣಗಳನ್ನು ಧರಿಸಿದ್ದಾನೆ. ಇಂದು ಇವನನ್ನು ಗಲ್ಲಿಗೇರಿಸಿದ್ದರೆ ಈ ಆಭರಣಗಳೆಲ್ಲಾ ನಿನ್ನ ಗಂಡನಿಗೆ ಸಿಕ್ಕುತ್ತಿತ್ತು. ನಿನಗೆ ಅದೃಷ್ಟವಿಲ್ಲ' ಎಂದರು. ಆ ಮಾತನ್ನು ಕೇಳಿ ಮತ್ತು ರಾಜಪುತ್ರನು ಧರಿಸಿರುವ ಆಭರಣಗಳನ್ನು ನೋಡಿ, ಯಮಪಾಲನ ಹೆಂಡತಿಯು ದುರಾಶಾವಶಳಾಗಿ, ತನ್ನ ಗಂಡನು ಇಲ್ಲವೆಂದು ಬಾಯಿಯಲ್ಲಿ ಹೇಳುತ್ತಾ ಕೈಯ ಸಂಜ್ಞೆಯಿಂದ ಮನೆಯೊಳಗಿದ್ದಾನೆಂದು ಸೂಚಿಸಿದಳು. ಆಗ ಆ ರಾಜದೂತರು ಮನೆಯೊಳಕ್ಕೆ ನುಗ್ಗಿ ಯಮದೂತರಂತೆ ಯಮಪಾಲನನ್ನು ಹಿಡಿದೆಳೆದುಕೊಂಡು ಹೋಗಿ, ದೊರೆಯ ಮುಂದೆ ನಿಲ್ಲಿಸಿ, ಯಮಪಾಲನು ರಾಜಾಜ್ಞೆಗೆ ಮನ್ನಣೆಯನ್ನು ಕೊಡದೆ ಸುಳ್ಳು ಹೇಳಿದನೆಂದು ನಿವೇದಿಸಿದರು. ಅದನ್ನು ಕೇಳಿ ದೊರೆಯು ಕೋಪದಿಂದ ಕಿಡಿಕಿಡಿಯಾಗಿ, ಆ ಯಮಪಾಲನನ್ನೂ ತನ್ನ ಮಗನನ್ನೂ ಬೆನ್ನು ಬೆನ್ನು ಸೇರಿಸಿ ಬಿಗಿದು ಹೊಳೆಯ ಮಡುವಿಗೆ ತಳ್ಳಿಬಿಡುವಂತೆ ಅಪ್ಪಣೆಮಾಡಿದನು. ಅದರಂತೆ ರಾಜದೂತರು ಅವರಿಬ್ಬರನ್ನೂ ಕಟ್ಟಿ ಹೊಳೆಯ ಆಳವಾದ ಮಡುವಿಗೆ ಹಾಕಿದರು. ಆಗ ಅಲ್ಲಿದ್ದ ಜಲದೇವತೆಯು ಯಮಪಾಲನ ದೃಢಪ್ರತಿಜ್ಞೆಗೆ ಮೆಚ್ಚಿ, ಆ ಬಂಧನವನ್ನು ಬಿಡಿಸಿ ಅಲ್ಲೇ ನೀರಿನ ಮೇಲೆ ತನ್ನ–ದೈವಿಕ ಶಕ್ತಿಯಿಂದ ಸಿಂಹಾಸನವನ್ನು ನಿರ್ಮಿಸಿ, ಅವರನ್ನು ಅದರ ಮೇಲೆ ಕುಳ್ಳಿರಿಸಿ, ಯಮಪಾಲನನ್ನು ಪೂಜಿಸಿ, ಅಹಿಂಸಾ ಧರ್ಮದ ಮಹಿಮೆಯನ್ನು ಲೋಕಕ್ಕೆ ತೋರಿಸಿದಳು. ಆ ಅದ್ಭುತವನ್ನು ನೋಡಿ, ದೊರೆ ಮೊದಲಾದವರೆಲ್ಲಾ ಅಭಯದಾನದಲ್ಲಿ, ಅಹಿಂಸಾ ಧರ್ಮದಲ್ಲಿ ದೃಢಶ್ರದ್ಧೆಯುಳ್ಳವರಾದರು.

ಇನ್ನು ಮೃಗಸೇನನೆಂಬ ಬೆಸ್ತರವನ ಕಥೆಯನ್ನು ವಿಚಾರಮಾಡುವುದಾದರೆ ಅವನು ಯಾವಾಗಲೂ ಮೀನುಗಳನ್ನು ಹಿಡಿದು ಕೊಂದು, ಅವುಗಳ ಮಾರಾಟದಿಂದಲೇ ಜೀವಿಸಿಕೊಂಡಿದ್ದನು. ಹೀಗಿರುವಾಗ ಅವನ ಕರ್ಮದ ಉಪಶಾಂತಿಯಿಂದ ಅವನಿಗೆ ಒಳ್ಳೆಯದಾಗುವ ಕಾಲವು ಬಂದೊದಗಿತು. ಒಂದಾನೊಂದು ದಿವಸ ಮೃಗಸೇನನು ಹೊಳೆಯ ದಡದಲ್ಲಿ ತಪಸ್ಸನ್ನು ಮಾಡು

ತ್ತಿದ್ದ ಒಬ್ಬರು ಮುನೀಶ್ವರರನ್ನು ಕಂಡನು. ಅವರು ಮಹಾತಪಸ್ವಿಗಳು. ಅವರ ಬಳಿಗೆ ಅನೇಕರು ಹೋಗಿ ವಂದನೆಯನ್ನು ಮಾಡಿ ಧರ್ಮೋಪದೇಶವನ್ನು ಕೇಳಿ, ವ್ರತನಿಯಮಗಳನ್ನು ಕೈಕೊಂಡು ಹೋಗುತ್ತಿದ್ದರು. ಅದನ್ನೆಲ್ಲಾ ಮೃಗಸೇನನು ನೋಡಿ ಆ ಮುನೀಶ್ವರರು ಮಹಾತ್ಮರೆಂದು ತಿಳಿದು, ಎಲ್ಲರೂ ಹೊರಟುಹೋದಮೇಲೆ ತಾನು ಅವರ ಬಳಿಗೆ ಹೋಗಿ ನಮಸ್ಕಾರವನ್ನು ಮಾಡಿ ತನಗೂ ಏನಾದರೂ ಹೇಳಬೇಕೆಂದು ಕೈಮುಗಿದು ಕೇಳಿಕೊಂಡನು. ಆಗ ಅವರು ಅಹಿಂಸಾ ಧರ್ಮದ ಮಹಿಮೆಯನ್ನು ಬಲು ಚೆನ್ನಾಗಿ ವರ್ಣನೆಮಾಡಿದರು. ಅದರಿಂದ ಅವನ ಹೃದಯದಲ್ಲಿ ಅಪೂರ್ವವಾದ ಪರಿಣಾಮವುಂಟಾದುದಾದರೂ ಅವನು ತನ್ನ ಕುಲವೃತ್ತಿಯನ್ನು ಬಿಡಲು ಸಾಧ್ಯವಿರಲಿಲ್ಲ. ಅವನು ತನಗೆ ಆತ್ಮಕಲ್ಯಾಣಕರವಾದ ಯಾವುದಾದರೊಂದು ಚಿಕ್ಕದಾದ ವ್ರತವನ್ನು ಕೊಡಬೇಕೆಂದು ಮುನಿಪುಂಗವರನ್ನು ಪ್ರಾರ್ಥಿಸಿಕೊಂಡನು. ಆಗ ಅವರು ಅವನ ಶಕ್ತಿಯನ್ನು ಯೋಚಿಸಿ 'ಅಯ್ಯಾ ! ನೀನು ಪ್ರತಿದಿವಸ ಮೀನುಗಳನ್ನು ಹಿಡಿಯುವುದಕ್ಕಾಗಿ ಬಲೆಯನ್ನು ಬೀಸಿದಾಗ, ಮೊತ್ತಮೊದಲು ನಿನ್ನ ಬಲೆಗೆ ಬಿದ್ದ ಮೀನನ್ನು ಬಿಟ್ಟುಬಿಡು' ಎಂದರು. ಆ ಉಪದೇಶವನ್ನು ಕೇಳಿ ಮೃಗಸೇನನು ಅದು ತನಗೆ ಅಸಾಧ್ಯವಲ್ಲವೆಂದು ಬಗೆದು, ಆ ವ್ರತವನ್ನು ಅವರಿಂದ ಕೈಕೊಂಡು ಹೊರಟುಹೋಗಿ, ಯಥಾಪ್ರಕಾರ ಹೊಳೆಯಲ್ಲಿ ಬಲೆಯನ್ನು ಬೀಸಿದನು. ಒಂದು ದೊಡ್ಡ ಮೀನು ಬಲೆಯಲ್ಲಿ ಬಿದ್ದಿತು. ಅದನ್ನು ತೆಗೆದು ಗುರುತಿಗಾಗಿ ಅದರ ಕಿವಿಗೆ ಒಂದು ದಾರವನ್ನು ಕಟ್ಟಿ ಹೊಳೆಗೆ ಬಿಟ್ಟನು. ಬಳಿಕ ಸ್ವಲ್ಪ ದೂರ ಹೋಗಿ ಬಲೆಯನ್ನು ಬೀಸಿದನು. ಮತ್ತೆ ಅದೇ ಮೀನು ಬಲೆಗೆ ಬಿದ್ದಿತು. ಅದನ್ನು ನೋಡಿ ಮೊದಲು ಸಿಕ್ಕಿದ ಮೀನೆಂದು ತಿಳಿದು, ಹೊಳೆಗೆ ಬಿಟ್ಟು, ದಡದಲ್ಲಿ ಸ್ವಲ್ಪದೂರ ಮೇಲೆ ಹೋಗಿ ಬಲೆಯನ್ನು ಬೀಸಿದನು. ದೈವವಶದಿಂದ ಮತ್ತೆ ಅದೇ ಮೀನು ಬಲೆಗೆ ಬಿದ್ದಿತು. ಮತ್ತೆ ಅದನ್ನು ಹೊಳೆಗೆ ಬಿಟ್ಟನು. ಹೀಗೆ ಐದು ಸಲವಾಯಿತು. ಆಗ ಮೃಗಸೇನನ ದೃಢಸಂಕಲ್ಪವನ್ನು ಪರೀಕ್ಷಿಸಲೋಸ್ಕರವೋ ಎನ್ನುವಂತೆ ಸೂರ್ಯದೇವನು ಅಸ್ತಾಚಲದಲ್ಲಿ ಅವಿತುಕೊಂಡನು. ಪಕ್ಷಿಗಳು ಮೌನಧಾರಣಮಾಡಿದುವು. ಮನುಷ್ಯರ ಸುಖಸಂಪತ್ತುಗಳು, ಹಗಲಿನಂತೆ, ಶಾಶ್ವತಗಳಲ್ಲವೆಂದೂ ದುಃಖದಾರಿದ್ರ್ಯಗಳು ರಾತ್ರಿಯಂತೆ ಬಂದೊದಗುತ್ತವೆಂದೂ ಆದುದರಿಂದ ಮೈಮರೆತಿರಬೇಡಿರೆಂದೂ

ಜಗತ್ತಿಗೆ ಬೋಧಿಸುವುದಕ್ಕೋಸ್ಕರವೋ ಎನ್ನುವಂತೆ ಅಂಧಕಾರವು ಜಗತ್ತನ್ನೆಲ್ಲಾ ಆವರಿಸಿತು. ಆಗ ಮೃಗಸೇನನು ರಿಕ್ತಹಸ್ತನಾಗಿ ನಿರಾಶನಾಗಿ ಬಲೆಯನ್ನು ಹೊತ್ತುಕೊಂಡು ಮನೆಗೆ ಹೋದನು. ಇಷ್ಟಾದರೂ ಮೃಗಸೇನನು ತನ್ನ ದೃಢಸಂಕಲ್ಪದಿಂದ ಸ್ವಲ್ಪವಾದರೂ ಚ್ಯುತನಾಗಲಿಲ್ಲ— ವ್ರತದಲ್ಲಿ ಬೇಸರಿಕೆಯುಂಟಾಗಲಿಲ್ಲ. ದೈವವು ತನ್ನ ಸಂಕಲ್ಪವನ್ನು ಪರೀಕ್ಷಿಸುತ್ತಿದೆಯೆಂದು ಅವನ ಭಾವನೆ.

ಮೃಗಸೇನನ ಮನೆಯಲ್ಲಿ ಅಂದು ಅಡಿಗೆಯಿಲ್ಲ. ಅವನ ಹೆಂಡತಿ ಯಮಘಂಟೆಯು ಬಹು ಕ್ರೂರಿ. ಅವನ ಶಾಂತಸ್ವಭಾವಕ್ಕೂ ಆಕೆಯ ಕ್ರೂರ ಸ್ವಭಾವಕ್ಕೂ ಸರಿಹೋಗುತ್ತಿರಲಿಲ್ಲ. ಅಂದು ಗಂಡನು ಅಡಿಗೆಯ ಸಾಮಗ್ರಿಗಳನ್ನು ತರುತ್ತಾನೆಂದು ರಾತ್ರಿ ಎಂಟು ಘಂಟೆಯವರೆಗೂ ದಾರಿ ನೋಡಿ ನೋಡಿ ಸಾಕಾಗಿ ಕೋಪದಿಂದ ಕಿಡಿಕಿಡಿಯಾಗಿ, ಮಡಿಕೆ ಕುಡಿಕೆಗಳಲ್ಲಿ ಅಲ್ಪ-ಸ್ವಲ್ಪ ಇದ್ದುದನ್ನು ಬೇಯಿಸಿ ತಿಂದು, ಬಾಗಿಲನ್ನು ಹಾಕಿ ಮಲಗಿಬಿಟ್ಟಳು.

ಮೃಗಸೇನನು ದಿನವೆಲ್ಲಾ ಉಪವಾಸವಿದ್ದು, ಬಳಲಿ ಬೆಂಡಾಗಿ ಮನೆಗೆ ಬಂದು, ಬಲೆಯನ್ನು ಜಗಲಿಯ ಮೇಲಿಟ್ಟು ನೋಡುವಲ್ಲಿ ಬಾಗಿಲು ಹಾಕಿತ್ತು. ಹೆಂಡತಿಯನ್ನು ಕರೆದು ಬಾಗಿಲನ್ನು ತೆರೆಯುವುದಕ್ಕೆ ಹೇಳುವಷ್ಟು ಧೈರ್ಯವು ಬರಲಿಲ್ಲ. ಬಳಿಕ ಜಗಲಿಯ ಮೇಲೆ ಮರದ ತುಂಡನ್ನು ತಲೆಯಡಿಗಿಟ್ಟು ಗುರೂಪದಿಷ್ಟವಾದ ಪಂಚನಮಸ್ಕಾರವನ್ನು ಸ್ಮರಿಸಿ ಮಲಗಿಕೊಂಡನು. ಮಧ್ಯರಾತ್ರಿಯಲ್ಲಿ ಒಂದು ಸರ್ಪವು ಅವನನ್ನು ಕಚ್ಚಿತು. ಆದರಿಂದ ಮೃಗಸೇನನು ಸತ್ತು ಅಹಿಂಸಾವ್ರತಮಹಿಮೆಯಿಂದ ಆ ನಗರದ ಗುಣಪಾಲನೆಂಬ ಶ್ರೇಷ್ಠಿಗೆ ಆತನ ಪತ್ನಿ ಧನಶ್ರೀಯ ಗರ್ಭದಲ್ಲಿ ಧನಕೀರ್ತಿಯೆಂಬ ಬಹು ಭಾಗ್ಯಶಾಲಿಯಾದ ಪುತ್ರನಾಗಿ ಜನಿಸಿದನು. ಧನಕೀರ್ತಿಯು ಶುಕ್ಲಪಕ್ಷದ ಚಂದ್ರನಂತೆ ವೃದ್ಧಿಯನ್ನು ಹೊಂದುತ್ತಾ ಸಕಲ ಕಲಾಪ್ರವೀಣನಾಗಿ ಐಹಿಕಸುಖವನ್ನೆಲ್ಲಾ ಭೋಗಿಸಿ, ಕೊನೆಯಲ್ಲಿ ಕೈವಲ್ಯರಮಾರಮಣನಾದನು. ಈ ಎರಡು ಕಥೆಗಳಿಂದ ಅಭಯದಾನದ ಅಥವಾ ಅಹಿಂಸಾಪರಮಧರ್ಮದ ಅನುಪಮವಾದ ಮಾಹಾತ್ಮ್ಯವು ವ್ಯಕ್ತವಾಗುವುದು.

ಈ ಅಭಯದಾನದಂತೆ ಶಾಸ್ತ್ರದಾನವನ್ನೂ ಮಾಡಬೇಕು. ಉತ್ತಮ ಶಾಸ್ತ್ರದಿಂದ ಉತ್ತಮ ಜ್ಞಾನವು ಪ್ರಾಪ್ತವಾಗುವುದರಿಂದ ಈ ದಾನಕ್ಕೆ ಜ್ಞಾನದಾನವೆಂದೂ ಹೆಸರಿದೆ. ಈ ದಾನದಲ್ಲಿ ಶ್ರದ್ಧೆಯನ್ನಿಟ್ಟು ದಾನಮಾಡುವವನು ಕ್ರಮದಿಂದ ಸರ್ವಕರ್ಮಕ್ಷಯವನ್ನು ಮಾಡಿ ಮೋಕ್ಷಸುಖವನ್ನು ಹೊಂದುವವನು.

ಲಿಖಿತ್ವಾ ಲೇಖಯಿತ್ವಾ ವಾ ಸಾಧುಭ್ಯೋ ದೀಯತೇ ಶ್ರುತಂ ।
ವ್ಯಾಖ್ಯಾಯತೇಥವಾ ಸ್ವೇನ ಶಾಸ್ತ್ರದಾನಂ ತದುಚ್ಯತೇ ॥

— ಶಾಸ್ತ್ರವನ್ನು ತಾನು ಬರೆದು, ಬೇರೆಯವರಿಂದ ಬರೆಯಿಸಿ ಅಥವಾ ತಾನು ವ್ಯಾಖ್ಯಾನವನ್ನು ಮಾಡಿ ಸಾಧುಪುರುಷರಿಗೆ ಶಾಸ್ತ್ರವನ್ನು ದಾನ ಮಾಡಿದರೆ ಅದಕ್ಕೆ ಶಾಸ್ತ್ರದಾನವೆಂದು ಹೆಸರು.

ಅಪರಸ್ಮಿನ್ ಭವೇ ಜೀವೋ ಬಿಭರ್ತಿ ಸಕಲಂ ಶ್ರುತಂ ।
ಮೋಕ್ಷ ಸೌಖ್ಯಮವಾಪ್ನೋತಿ ಶಾಸ್ತ್ರದಾನಫಲಾನ್ನರಃ ॥

— ಮನುಷ್ಯನು ಶಾಸ್ತ್ರದಾನದ ಫಲದಿಂದ ಮತ್ತೊಂದು ಭವದಲ್ಲಿ ಸರ್ವಶಾಸ್ತ್ರವನ್ನು ತಿಳಿಯುವವನಾಗುವನು. ಕೊನೆಗೆ ಮೋಕ್ಷಸೌಖ್ಯವನ್ನೂ ಹೊಂದುವನು.'

ಮುನಿಪುಂಗವರ ಈ ಉಪದೇಶವನ್ನು ಕೇಳಿ ಸೋಮಪ್ರಭರಾಜನು ಜೈನಧರ್ಮದಲ್ಲಿ ಬಹುಶ್ರದ್ಧೆಯುಳ್ಳವನಾಗಿ, ಯಾರಿಗೆ ಯಾವ ದಾನವನ್ನು ಮಾಡಬೇಕೆಂಬ ವಿವರವನ್ನು ನಿರೂಪಿಸಬೇಕೆಂದು ಪ್ರಾರ್ಥಿಸಿದನು.

ಆಗ ಮುನಿವರ್ಯರು ಹೇಳುತ್ತಾರೆ—

ನ ದದ್ಯಾದ್ಯಶಸೇ ದಾನಂ ನ ಭಯಾನ್ನೋಪಕಾರಿಣೇ ।
ನ ನೃತ್ಯಗೀತಶೀಲೇಭ್ಯೋ ಹಾಸಕೇಭ್ಯಶ್ಚ ಧಾರ್ಮಿಕಃ ॥

— ಧಾರ್ಮಿಕನು ಯಶಸ್ಸಿಗೋಸ್ಕರ ದಾನವನ್ನು ಮಾಡಬಾರದು. ಭಕ್ತಿಯಿಲ್ಲದೆ ಶಾಪಾದಿಗಳ ಭಯದಿಂದ ದಾನವನ್ನು ಮಾಡಬಾರದು. ತನಗೆ ಉಪಕಾರವನ್ನು ಮಾಡಿದವನೆಂದು ಆ ದೃಷ್ಟಿಯಿಂದ ಉಪಕಾರಿಗೆ ದಾನವನ್ನು ಮಾಡಬಾರದು. ನರ್ತಕರಿಗೂ ಗಾಯಕರಿಗೂ ಹಾಸ್ಯಗಾರರಿಗೂ ದಾನವನ್ನು

ಮಾಡಬಾರದು. ಅವರು ಸತ್ಪಾತ್ರರೆಂಬ ಭಾವನೆಯಿಂದ ದಾನವನ್ನು ಮಾಡ ಬಾರದೆಂಬರ್ಥವು.

ಯಥಾವಿಧಿ ಯಥಾದೇಶಂ ಯಥಾದ್ರವ್ಯಂ ಯಥಾಗಮಂ ।
ಯಥಾಪಾತ್ರಂ ಯಥಾಕಾಲಂ ದಾನಂ ದೇಯಂ ಗೃಹಾಶ್ರಮೈಃ ॥

— ಗೃಹಸ್ಥಾಶ್ರಮಿಗಳು ವಿಧಿಗನುಸಾರವಾಗಿಯೂ ದೇಶಾನುಸಾರವಾಗಿಯೂ ಪದಾರ್ಥಾನುಸಾರವಾಗಿಯೂ ಆಗಮಾನುಸಾರವಾಗಿಯೂ ಪಾತ್ರಾನುಸಾರ ವಾಗಿಯೂ ಕಾಲಾನುಸಾರವಾಗಿಯೂ ದಾನವನ್ನು ಮಾಡಬೇಕು.

ವಿಜೀ (ವ) ರ್ಣಂ ವಿರಸಂ ವಿದ್ಧಮಸಾತ್ಮ್ಯಂ ಪ್ರಸೃತಂ ಚ ಯತ್ ।
ಮುನಿಭ್ಯೋಽನ್ನಂ ನ ತದ್ದೇಯಂ ಯಚ್ಚ ಭುಕ್ತಂ ಗದಾವಹಂ ॥

— ತಂಗಳಾಗಿರುವ ಅಥವಾ ಬಣ್ಣವು ಕೆಟ್ಟುಹೋಗಿರುವ ಆಹಾರವನ್ನೂ ರಸವಿಲ್ಲದ ಆಹಾರವನ್ನೂ ಹುಳುಕಾಗಿರುವ ಆಹಾರವನ್ನೂ ಶರೀರಕ್ಕಾಗದ ಆಹಾರವನ್ನೂ ಹೆಚ್ಚಾಗಿರುವ ಅಂದರೆ ಹುಳಿತಿರುವ ಆಹಾರವನ್ನೂ ರೋಗ ವನ್ನುಂಟುಮಾಡುವ ಆಹಾರವನ್ನೂ ಮುನಿಗಳಿಗೆ ಕೊಡಬಾರದು.

ಉಚ್ಛಿಷ್ಟಂ ನೀಚಲೋಕಾರ್ಹಮನ್ಯೋದ್ದಿಷ್ಟಂ ವಿಗರ್ಹಿತಂ ।
ನ ದೇಯಂ ದುರ್ಜನಸ್ಪೃಷ್ಟಂ ದೇವಯಕ್ಷಾದಿಕಲ್ಪಿತಂ ॥

— ಎಂಜಲಾಗಿರುವ ಆಹಾರವನ್ನೂ ನೀಚಜನರಿಗೆ ಯೋಗ್ಯವಾದ ಆಹಾರ ವನ್ನೂ ಬೇರೆಯವರಿಗೋಸ್ಕರ ಮಾಡಿರುವ ಆಹಾರವನ್ನೂ ನಿಂದ್ಯವಾದ ಆಹಾರವನ್ನೂ ದುಷ್ಟಜನರು ಮುಟ್ಟಿದ ಆಹಾರವನ್ನೂ ದೇವರು ಯಕ್ಷರು ಮೊದಲಾದವರಿಗೆಂದು ಮಾಡಿದ ಆಹಾರವನ್ನೂ ಮುನಿಗಳಿಗೆ ಕೊಡಬಾರದು.

ಗ್ರಾಮಾಂತರಾತ್ಸಮಾನೀತಂ ಮಂತ್ರಾನೀತಮುಪಾಯನಂ ।
ಅದೇಯಮಾಪಣಕ್ರೀತಂ ವಿರುದ್ಧಂ ಚಾಯಥಾರ್ತುಕಂ ॥

— ಬೇರೆ ಊರಿನಿಂದ ತಂದ ಆಹಾರವನ್ನೂ ಮಂತ್ರದಿಂದ ತರಿಸಿದ ಆಹಾರ ವನ್ನೂ ಕೈಗಾಣಿಕೆಯಾಗಿ ಬಂದ ವಸ್ತುವನ್ನೂ ಅಂಗಡಿಯಿಂದ ಬೆಲೆಗೆ ತಂದ (ಹೋಟಲಿನ) ಆಹಾರವನ್ನೂ ಶರೀರಕ್ಕೆ ವಿರುದ್ಧವಾದ ಆಹಾರವನ್ನೂ ಋತು

ಧರ್ಮವನ್ನು ಮೀರಿ-ಅಕಾಲದಲ್ಲಿ ಉಂಟಾದ ವಸ್ತುವನ್ನೂ ಮುನಿಗಳಿಗೆ ಕೊಡ ಬಾರದು. ಸ್ವಭಾವಜನ್ಯವೂ ನಿರ್ದುಷ್ಟವೂ ಪರಿಶುದ್ಧವೂ ಆದ ಪದಾರ್ಥ ವನ್ನು ಮುನಿಗಳ ಆಹಾರದಾನಕ್ಕೆ ಉಪಯೋಗಿಸಬೇಕೆಂದು ಭಾವವು.

ಬಾಲಾಜ್ಞಾನತಪಃಕ್ಷೀಣವೃದ್ಧವ್ಯಾಧಿಸಮನ್ವಿತಾನ್ ।
ಮುನೀನುಪಚರೇನ್ನಿತ್ಯಂ ಯತಸ್ತೇ ಸ್ಯುಸ್ತಪಃಕ್ಷಮಾಃ ॥

—ಬಾಲತಪಸ್ವಿ-ನೂತನವಾಗಿ ದೀಕ್ಷೆಯನ್ನು ಪಡೆದ ಮುನಿಗಳನ್ನೂ ತಿಳು ವಳಿಕೆಯಿಲ್ಲದ ಮುನಿಗಳನ್ನೂ ತಪಸ್ಸಿನಿಂದ ಕೃಶವಾಗಿರುವ ಮುನಿಗಳನ್ನೂ ವೃದ್ಧರಾಗಿರುವ ಮುನಿಗಳನ್ನೂ ವ್ಯಾಧಿಪೀಡಿತರಾಗಿರುವ ಮುನಿಗಳನ್ನೂ ಯಾವಾಗಲೂ ಉಪಚರಿಸಬೇಕು. ಆದರಿಂದ ಅವರು ತಪಸ್ಸನ್ನು ಮಾಡುವು ದಕ್ಕೆ ಸಮರ್ಥರಾಗುವರು.

ಅಭಕ್ತಾನಾಂ ಕದರ್ಯಾಣಾಮವ್ರತಾನಾಂ ಚ ಸದ್ಮಸು ।
ನ ಭುಂಜೀತ ತಥಾ ಸಾಧುರ್ದೈನ್ಯಕಾರುಣ್ಯಕಾರಿಣಾಂ ॥

—ಸಾಧುವು ಭಕ್ತರಲ್ಲದವರ ಮನೆಗಳಲ್ಲಿಯೂ ಕೃಪಣ ಕ್ಷುದ್ರರ ಮನೆಗಳ ಲ್ಲಿಯೂ ವ್ರತಹೀನರ ಮನೆಗಳಲ್ಲಿಯೂ ದೈನ್ಯವೃತ್ತಿಯನ್ನೂ ಕಾರುಣ್ಯಭಾವ ವನ್ನೂ ತೋರಿಸುವವರಲ್ಲಿಯೂ ಭೋಜನವನ್ನು ಮಾಡಬಾರದು.

ದಾಸಿಯು ಕಾರುಣ್ಯಬುದ್ಧಿಯಿಂದ ಪಾತ್ರಾಪಾತ್ರವಿವೇಚನೆಯಿಲ್ಲದೆ ಎಲ್ಲರಿಗೂ ದಾನವನ್ನು ಮಾಡಬೇಕು.' ಮುನೀಶ್ವರರ ಈ ಉಪದೇಶವನ್ನು ಕೇಳಿ ಸೋಮಪ್ರಭರಾಜನು ಶುದ್ಧಶ್ರಾವಕನಾದನು.

ವಶೀಕೃತೇಂದ್ರಿಯಗ್ರಾಮಃ ಕೃತಜ್ಞೋ ವಿನಯಾನ್ವಿತಃ ।
ನಿಷ್ಕಷಾಯಃ ಪ್ರಶಾಂತಾತ್ಮಾ ಸಮ್ಯಗ್ದೃಷ್ಟಿರ್ಮಹಾಶುಚಿಃ ॥
ಶ್ರದ್ಧಾಲುರ್ಭಕ್ತಿಸಂಪನ್ನಃ ನಿತ್ಯಂ ಷಟ್ಕರ್ಮತತ್ಪರಃ ।
ವ್ರತಶೀಲತಪೋದಾನದೇವಪೂಜಾಸಮುದ್ಯತಃ ॥

—ಸಮ್ಯಗ್ದೃಷ್ಟಿಯಾದ ಶ್ರಾವಕನು ಇಂದ್ರಿಯಸಮೂಹವನ್ನು ತನ್ನ ವಶ ದಲ್ಲಿಟ್ಟಿರುವವನೂ ಉಪಕಾರಸ್ಮರಣೆಯುಳ್ಳವನೂ ವಿನಯವುಳ್ಳವನೂ

ಕ್ರೋಧಾಹಂಕಾರಾದಿ ಕಷಾಯಭಾವಗಳಿಲ್ಲದಿರುವವನೂ ಶಾಂತವಾದ ಭಾವವುಳ್ಳವನೂ ಬಹಳ ಶುಚಿರ್ಭೂತನೂ ಶ್ರದ್ಧಾಪರನೂ ಭಕ್ತಿಸಂಪನ್ನನೂ ಯಾವಾಗಲೂ ದೇವಪೂಜೆ, ಗುರುಸೇವೆ, ಶಾಸ್ತ್ರಾಧ್ಯಯನ, ಸಂಯಮ (ಇಂದ್ರಿಯನಿಗ್ರಹ ಮತ್ತು ಪ್ರಾಣಿ ದಯೆ), ತಪ, ದಾನ ಈ ಆರು ಕರ್ಮಗಳಲ್ಲಿ ಆಸಕ್ತಿಯುಳ್ಳವನೂ ವ್ರತ, ಶೀಲ, ತಪಸ್ಸು, ದಾನ, ಜಿನಪೂಜೆ ಇವುಗಳಲ್ಲಿ ಉದ್ಯುಕ್ತನೂ ಆಗಿರುತ್ತಾನೆ.

ಸೋಮಪ್ರಭರಾಜನು ಇವೇ ಮೊದಲಾದ ಗುಣಗಳುಳ್ಳವನಾಗಿದ್ದು, ಕಾಲಕ್ರಮದಿಂದ ಸಕಲಪರಿಗ್ರಹಗಳನ್ನು ತ್ಯಜಿಸಿ, ತಪಸ್ವಿಯಾಗಿ, ಕಠಿಣ ತಪಸ್ಸನ್ನು ಮಾಡುತ್ತಾ ಆತ್ಮಾನಂದದಲ್ಲಿ ಮಗ್ನನಾದನು. ಅವನ ಪುತ್ರನು ಪಟ್ಟಕ್ಕೆ ಬಂದನು. ಈ ಬಹುಸುವರ್ಣಯಜ್ಞದ ಸಮಾಚಾರವನ್ನೆಲ್ಲಾ ಕೇಳಿ ಸೋಮಶರ್ಮ ಮಂತ್ರಿಯು 'ಮುನಿಪುಂಗವರೇ ! ಈಗ ನನಗೆ ತಮ್ಮ ಪಾದಗಳು ಶರಣಗಳು. ನನಗೆ ಜಿನಧರ್ಮವನ್ನು ದಯೆಪಾಲಿಸಿ' ಎಂದನು. ಆ ಮಾತನ್ನು ಕೇಳಿ ಮುನಿವರ್ಯರು ಅವನಿಗೆ ಸಮ್ಯಗ್ದರ್ಶನಪೂರ್ವಕವಾದ ಅಹಿಂಸಾದಿ ಶ್ರಾವಕವ್ರತವನ್ನು ಅನುಗ್ರಹಿಸಿದರು. ಆ ವ್ರತವನ್ನು ಸ್ವೀಕರಿಸಿ, ಮಂತ್ರಿಯು ಮುಂದೆ ತಾನು ಲೋಹಮಯವಾದ ಖಡ್ಗವನ್ನು ಧರಿಸುವುದಿಲ್ಲವೆಂದು ಮುನೀಶ್ವರರ ಸಾನ್ನಿಧ್ಯದಲ್ಲಿ ನಿಯಮವನ್ನು ಮಾಡಿ, ಮರದ ಖಡ್ಗವನ್ನು ಮಾಡಿಸಿ, ಒರೆಯಲ್ಲಿಟ್ಟುಕೊಂಡು ರಾಜಸೇವೆಯನ್ನು ಮಾಡುತ್ತಿದ್ದನು. ಹೀಗೆ ಬಹುಕಾಲ ಕಳೆಯಿತು. ಈ ರಹಸ್ಯವನ್ನು ತಿಳಿದ ಒಬ್ಬ ದುಷ್ಟನು ಒಂದು ದಿವಸ ರಾಜನ ಬಳಿಗೆ ಹೋಗಿ 'ದೇವಾ ! ತಮ್ಮ ಸೋಮಶರ್ಮ ಮಂತ್ರಿಯು ಮರದ ಖಡ್ಗವನ್ನು ಒರೆಯಲ್ಲಿಟ್ಟುಕೊಂಡು ತಮ್ಮ ಸೇವೆಯನ್ನು ಮಾಡುವವನಂತೆ ನಟಿಸುತ್ತಿದ್ದಾನೆ. ನಿಜವಾಗಿಯೂ ಅವನು ತಮ್ಮ ಸೇವಕನಲ್ಲ. ಅವನಿಗೆ ತಮ್ಮಲ್ಲಿ ಭಕ್ತಿಯಿಲ್ಲ. ಯುದ್ಧದಲ್ಲಿ ಮರದ ಖಡ್ಗದಿಂದ ಪ್ರಯೋಜನವೇನು ?' ಎಂದು ಚಾಡಿಯನ್ನು ಹೇಳಿದನು. ದುಷ್ಟ-ದುರ್ಜನರು ತಮಗೆ ಯಾವ ಪ್ರಯೋಜನವೂ ಇಲ್ಲದಿದ್ದರೂ ಸಜ್ಜನರಿಗೆ ಕೇಡನ್ನು ಮಾಡುವುದು ಅವರ ಸ್ವಭಾವವಾಗಿರುತ್ತದೆ. ತಮಗೆ ಕೇಡನ್ನುಂಟುಮಾಡಿಕೊಂಡಾದರೂ ಸತ್ಪುರುಷರಿಗೆ ಕೇಡನ್ನು ಮಾಡುವುದೂ ಉಂಟು.

ತ್ಯಕ್ತ್ವಾಪಿ ನಿಜಪ್ರಾಣಾನ್ ಪರಸುಖವಿಘ್ನಂ ಖಲಃ ಕರೋತ್ಯೇವ ।
ಪತಿಕ್ತಾ ಕಬಲೇ ಸದ್ಯೋ ವಮಯತಿ ಖಲು ಮಕ್ಷಿಕಾ ಹಿ
ಭೋಕ್ತಾರಂ ॥

—ದುಷ್ಟನು ತನ್ನ ಪ್ರಾಣಗಳನ್ನು ಬಿಟ್ಟಾದರೂ ಬೇರೆಯವರ ಸುಖಕ್ಕೆ ಅಡ್ಡಿಯನ್ನು ಮಾಡಿಯೇ ಮಾಡುತ್ತಾನೆ. ನೊಣವು ತುತ್ತಿನಲ್ಲಿ ಬಿದ್ದೊಡನೆಯೇ ಊಟಮಾಡುವವನಿಗೆ ವಾಂತಿಯನ್ನುಂಟುಮಾಡಿಯೇ ಮಾಡುತ್ತದೆ. ತನ್ನ ಪ್ರಾಣವನ್ನು ಕಳೆದುಕೊಂಡಾದರೂ ಊಟಮಾಡುವವನಿಗೆ ವಾಂತಿಯನ್ನು ಮಾಡಿಸುವುದೆಂದು ಭಾವವು.

ಏಕೇ ಸತ್ಪುರುಷಾಃ ಪರಾರ್ಥಘಟಕಾಃ ಸ್ವಾರ್ಥಾನ್ ಪರಿತ್ಯಜ್ಯ ಯೇ।
ಸಾಮಾನ್ಯಾಸ್ತು ಪರಾರ್ಥಮುದ್ಯಮಭೃತಃ ಸ್ವಾರ್ಥಾವಿರೋಧೇನ
ಯೇ ॥
ತೇಮೀ ಮಾನುಷರಾಕ್ಷಸಾಃ ಪರಹಿತಂ ಸ್ವಾರ್ಥಾಯ ನಿಘ್ನಂತಿ ಯೇ ।
ಯೇ ತು ಘ್ನಂತಿ ನಿರರ್ಥಕಂ ಪರಹಿತಂ ತೇ ಕೇ ನ ಜಾನೀಮಹೇ ॥

—ಸ್ವಪ್ರಯೋಜನಗಳನ್ನು ಪರಿತ್ಯಜಿಸಿ, ಬೇರೆಯವರಿಗೆ ಪ್ರಯೋಜನಗಳನ್ನುಂಟುಮಾಡುವವರು ಸತ್ಪುರುಷರು. ಅಂತಹವರು ಕೆಲವೇ ಮಂದಿಗಳಿರಬಹುದು-ಬಹು ವಿರಳ. ಸ್ವಪ್ರಯೋಜನಗಳಿಗೆ ಅಡ್ಡಿಯಾಗದಂತೆ ಬೇರೆಯವರ ಪ್ರಯೋಜನಕ್ಕೋಸ್ಕರ ಕೆಲಸ ಮಾಡುವವರು ಸಾಮಾನ್ಯ ಮನುಷ್ಯರು. ಸ್ವಪ್ರಯೋಜನಕ್ಕೋಸ್ಕರ ಪರಹಿತವನ್ನು ನಾಶಮಾಡುವವರು ಮನುಷ್ಯರೂಪಿಗಳಾದ ರಾಕ್ಷಸರು. ನಿಷ್ಪ್ರಯೋಜನವಾಗಿ (ನೊಣದಂತೆ) ಪರಹಿತವನ್ನು ನಾಶಮಾಡುವವರಾದರೋ ಅವರಾರೆಂಬುದು ನಮಗೆ ತಿಳಿಯದು. ರಾಕ್ಷಸರಿಗಿಂತಲೂ ದುಷ್ಟರೆಂದು ಭಾವವು.

ಸೋಮಶರ್ಮ ಮಂತ್ರಿಗೆ ಕೇಡನ್ನು ತಂದೊಡ್ಡಿದ ಮನುಷ್ಯನು ಈ ಕೊನೆಯ ತರಗತಿಗೆ ಸೇರತಕ್ಕವನೆಂದು ಹೇಳಬಹುದಲ್ಲವೇ ? ಈ ಪದ್ಯದಲ್ಲಿ ಹೇಳಿರುವ ನಾಲ್ಕು ತರಗತಿಯ ಮನುಷ್ಯರಲ್ಲಿ ಈ ಕಾಲದಲ್ಲಿ ತಾವು ಯಾವ ತರಗತಿಗೆ ಸೇರತಕ್ಕವರೆಂಬುದನ್ನು ಅವರವರೇ ಸ್ವಾನುಭವದಿಂದ ನಿರ್ಣಯಿಸಿಕೊಳ್ಳಬೇಕು.

ದೊರೆಯು ಆ ದುಷ್ಟನ ಚಾಡಿಮಾತನ್ನು ಕೇಳಿ, ಆ ವಿಷಯವನ್ನು ತನ್ನ ಮನಸ್ಸಿನಲ್ಲಿಟ್ಟುಕೊಂಡು ಸುಮ್ಮನಿದ್ದನು. ಒಂದಾನೊಂದು ದಿವಸ ದೊರೆಯು ಖಡ್ಗದ ಪ್ರಸ್ತಾಪವನ್ನೆತ್ತಿ, ಒರೆಯಿಂದ ತನ್ನ ಖಡ್ಗವನ್ನೆಳೆದು ಸಮಸ್ತ ರಾಜ ಕುಮಾರರ ಮುಂದೆ ತೋರಿಸಿದನು. ಅವರೆಲ್ಲರೂ ಆ ಖಡ್ಗವನ್ನು ಪ್ರಶಂಸಿಸಿದರು. ಹಾಗೆ ಎಲ್ಲಾ ಅರಸುಮಕ್ಕಳೂ ತಮ್ಮ ತಮ್ಮ ಖಡ್ಗಗಳನ್ನು ಒರೆಯಿಂದಿರಿದು ತೋರಿಸುವಂತೆ ದೊರೆಯು ಹೇಳಿದನು. ಅದರಂತೆ ಅವರೆಲ್ಲರೂ ತಮ್ಮ ಖಡ್ಗಗಳನ್ನು ತೋರಿಸಿದರು. ಬಳಿಕ ದೊರೆಯು ಸೋಮಶರ್ಮ ಮಂತ್ರಿಯನ್ನು ಸಂಬೋಧಿಸಿ ಅವನ ಖಡ್ಗವನ್ನು ತೋರಿಸುವಂತೆ ಅಪ್ಪಣೆ ಮಾಡಿದನು. ಸೋಮಶರ್ಮನು ದೊರೆಯ ಇಂಗಿತವನ್ನು ತಿಳಿದು 'ಯಾರೋ ದುಷ್ಟರು ಚಾಡಿಯನ್ನು ಹೇಳಿರಬೇಕು. ಇಲ್ಲದಿದ್ದರೆ ದೊರೆಯು ನನ್ನ ಖಡ್ಗವನ್ನು ಪರೀಕ್ಷಿಸುತ್ತಿರಲಿಲ್ಲ' ಎಂದು ಮನಸ್ಸಿನಲ್ಲಿ ಚಿಂತಿಸಿ, ಬಳಿಕ ದೇವರನ್ನೂ ಗುರುವನ್ನೂ ಸ್ಮರಿಸಿ ಖಡ್ಗಸಹಿತವಾದ ಆ ತನ್ನ ಒರೆಯನ್ನು ದೊರೆಯ ಕೈಗೆ ಕೊಟ್ಟನು. ದೊರೆಯು ಆ ಒರೆಯಿಂದ ಖಡ್ಗವನ್ನು ಇರಿದು ನೋಡುವಲ್ಲಿ, ಅದು ಲೋಹದ ಖಡ್ಗವಾಗಿ ಸೂರ್ಯನಂತೆ ಹೊಳೆಯಿತು. ಆಗ ದೊರೆಯು ತನಗೆ ಚಾಡಿಯನ್ನು ಹೇಳಿದ್ದ ದುಷ್ಟನ ಮುಖವನ್ನು ನೋಡಿ 'ಎಲೌ ದುಷ್ಟಾತ್ಮನೇ ! ನನ್ನ ಮುಂದೆಯೂ ನೀನು ಸುಳ್ಳನ್ನು ಹೇಳಿದೆಯಾ ? ಬೇರೆಯವರ ದೋಷವನ್ನು ಹುಡುಕುವುದು ದುಷ್ಟರ ಸ್ವಭಾವವಾಗಿದೆ.

ಸ್ವಗುಣಾನಿವ ಪರದೋಷಾನ್ ವಕ್ತುಂ ನ ಸತೋಽಪಿ ಶಕ್ನುವಂತಿ ಬುಧಾಃ ।
ಸ್ವಗುಣಾನಿವ ಪರದೋಷಾನಸತೋಽಪಿ ಖಲಾಶ್ಚ ಕಥಯಂತಿ ॥

— ವಿದ್ವಾಂಸರು ತಮ್ಮಲ್ಲಿ ಗುಣಗಳಿದ್ದರೂ ಅವುಗಳನ್ನು ಹೇಳದಿರುವಂತೆ ಪರರಲ್ಲಿ ದೋಷಗಳಿದ್ದರೂ ಅವುಗಳನ್ನೂ ಹೇಳುವುದಿಲ್ಲ. ದುಷ್ಟರಾದರೋ ತಮ್ಮಲ್ಲಿಲ್ಲದಿರುವ ಗುಣಗಳನ್ನು ಹೇಳಿಕೊಳ್ಳುವಂತೆ, ಬೇರೆಯವರಲ್ಲಿಲ್ಲದಿರುವ ದೋಷಗಳನ್ನು ಹೇಳುತ್ತಾರೆ.'

ಆಗ ಸೋಮಶರ್ಮನು ದೊರೆಯನ್ನು ಕುರಿತು 'ಎಲೈ ರಾಜನೇ ! ದೊರೆಯು ದೇವತಾಸ್ವರೂಪನು. ಅವನ ಮುಂದೆ ಯಾವಾಗಲೂ ಸುಳ್ಳನ್ನು ಹೇಳಬಾರದು.

ಸರ್ವದೇವಮಯೋ ರಾಜಾ ವದಂತಿ ವಿಬುಧಾ ಜನಾಃ ।
ತತ್ಸರ್ವದೇವವತ್ಪಶ್ಯೇತ್ ನ ವ್ಯಲೀಕೇನ ಜಾತುಚಿತ್ ॥

—ದೊರೆಯು ಸಮಸ್ತದೇವತಾಸ್ವರೂಪನೆಂದು ವಿದ್ವಜ್ಜನರು ಹೇಳುತ್ತಾರೆ. ಆದುದರಿಂದ ದೊರೆಯನ್ನು ಸರ್ವದೇವಸ್ವರೂಪನನ್ನಾಗಿ ಕಾಣಬೇಕು. ಅವನ ಮುಂದೆ ಎಂದೂ ಸುಳ್ಳನ್ನು ನುಡಿಯಬಾರದು.

ಈ ಮನುಷ್ಯನು ಹೇಳಿರುವುದು ಸತ್ಯ. ಅದಕ್ಕೆ ಕಾರಣವಿದೆ. ಆದುದರಿಂದ ಇವನ ಮೇಲೆ ಕೋಪಿಸಬೇಡ. ಇವನು ಹೇಳಿರುವುದೆಲ್ಲವೂ ಸತ್ಯವಾದುದು' ಎಂದನು. ಸೋಮಶರ್ಮನ ಮಾತನ್ನು ಕೇಳಿ ದೊರೆಯು ತನ್ನ ಮನಸ್ಸಿನಲ್ಲಿ 'ಆಹಾ ! ಇವನು ಸತ್ಪುರುಷನು. ತನಗೆ ಅಪಕಾರವನ್ನು ಮಾಡಿದ ಮನುಷ್ಯನಿಗೂ ಶ್ರೇಯಸ್ಸನ್ನು ಕೋರುತ್ತಾನೆ. ತನಗೆ ಹಿತವನ್ನು ಬಯಸುವವನಿಗೂ ಅಹಿತವನ್ನು ಕೋರುವ ಮನುಷ್ಯನಿಗೆ ಧಿಕ್ಕಾರವಿರಲಿ' ಎಂದು ವಿಚಾರಮಾಡಿ ಆ ಮರದ ಖಡ್ಗವು ಲೋಹದ ಖಡ್ಗವಾಗಿ ಪರಿಣಮಿಸಿದುದು ಹೇಗೆಂದು ಸೋಮಶರ್ಮನನ್ನು ಪ್ರಶ್ನೆ ಮಾಡಿದನು. ಅವನು ದೊರೆಗೆ ಎಲ್ಲಾ ಸಮಾಚಾರವನ್ನು ತಿಳಿಸಿ 'ಎಲೈ ಸ್ವಾಮಿಯೇ ! ಲೋಹದ ಖಡ್ಗವನ್ನು ಹಿಡಿಯುವುದಿಲ್ಲವೆಂದು ನನಗೆ ನಿಯಮವಿದೆ. ನಾನು ದೇವರಲ್ಲಿಯೂ ಗುರುವಿನಲ್ಲಿಯೂ ನಿಶ್ಚಲವಾದ ಭಕ್ತಿಯುಳ್ಳವನಾಗಿರುವುದರಿಂದ, ಮರದ ಖಡ್ಗವು ಲೋಹದ ಖಡ್ಗವಾಗಿ ಪರಿಣಮಿಸಿತು. ನನ್ನನ್ನು ಕ್ಷಮಿಸು, ಎಂದನು. ಆ ಮಾತನ್ನು ಕೇಳಿ ದೊರೆಯೂ ಜನಗಳೂ ಸೋಮಶರ್ಮ ಮಂತ್ರಿಯನ್ನು ಪ್ರಶಂಸಿಸಿ, ಸತ್ಕರಿಸಿದರು. ಅವನ ದೃಢಶ್ರದ್ಧೆಗೆ ಮೆಚ್ಚಿ ದೇವತೆಗಳು ಪಂಚಾಶ್ಚರ್ಯಗಳನ್ನು ಮಾಡಿ, ಅವನನ್ನು ಸತ್ಕರಿಸಿದರು.

ಧರ್ಮದ ಈ ಮಹಿಮೆಯನ್ನೆಲ್ಲಾ ನೋಡಿ ಮತ್ತು ಕೇಳಿ, ಅಜಿತಂಜಯ ರಾಜನು ಧರ್ಮದಲ್ಲಿ ದೃಢಶ್ರದ್ಧೆಯುಳ್ಳವನಾಗಿಯೂ ಧರ್ಮಾಚರಣೆಯಿಂದ ಆತ್ಮಕಲ್ಯಾಣವನ್ನು ಮಾಡಿಕೊಳ್ಳಬೇಕೆಂದಿಚ್ಛಿಸಿ, ಸಂಸಾರ ಶರೀರ ಭೋಗ

ಗಳಲ್ಲಿ ವೈರಾಗ್ಯವುಳ್ಳವನಾಗಿ, ಶತ್ರುಂಜಯನೆಂಬ ತನ್ನ ಮಗನಿಗೆ ರಾಜ್ಯ ಭಾರವನ್ನು ವಹಿಸಿ, ಸಮಾಧಿಗುಪ್ತಭಟ್ಟಾರಕರೆಂಬ ತಪೋಧನರ ಬಳಿಯಲ್ಲಿ ದೀಕ್ಷೆಯನ್ನು ಸ್ವೀಕರಿಸಿ, ಪರಮ ತಪಸ್ವಿಯಾದನು. ಸೋಮಶರ್ಮಮಂತ್ರಿಯೂ ದೇವಶರ್ಮನೆಂಬ ತನ್ನ ಪುತ್ರನಿಗೆ ಮಂತ್ರಿ ಪದವಿಯನ್ನು ವಹಿಸಿ, ಪರಮ ತಪಸ್ವಿಯಾದನು. ಇನ್ನೂ ಹಲವರು ತಪಸ್ವಿಗಳಾದರು. ಕೆಲವರು ಶ್ರಾವಕ ರಾದರು. ಮತ್ತೆ ಕೆಲವರು ಭದ್ರಪರಿಣಾಮಿಗಳಾದರು. ದೊರೆಯ ಹೆಂಡತಿ ಯಾದ ಸುಪ್ರಭೆಯೂ ಮಂತ್ರಿಯ ಹೆಂಡತಿಯಾದ ಸೋಮೆಯೂ ಅನೇಕ ಸ್ತ್ರೀಯರೊಡನೆ ಅಭಯಮತಿಯೆಂಬ ಆರ್ಯಿಕಾ–ತಪಸ್ವಿನಿಯ ಬಳಿಯಲ್ಲಿ ತಪಸ್ವಿನಿಯರಾದರು. ಕೆಲವರು ಶ್ರಾವಕಿಯರಾದರು. ಇದನ್ನೆಲ್ಲಾ ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಆದುದರಿಂದ ನನಗೆ ದೃಢತರವಾದ ಸಮ್ಯಕ್ತ್ವ ವುಂಟಾಯಿತು."

ಈ ಪ್ರಕಾರವಾಗಿ ವಿಷ್ಣುಶ್ರೀಯು ಹೇಳಿದುದನ್ನು ಕೇಳಿ, ಸಂತುಷ್ಟನಾದ ಅರ್ಹದ್ದಾಸಶ್ರೇಷ್ಠಿಯು ವಿಷ್ಣುಶ್ರೀಯನ್ನು ಕುರಿತು, 'ಎಲೈ ಪತ್ನಿಯೇ! ನೀನು ಹೇಳಿದುದನ್ನೆಲ್ಲಾ ನಾನು ನಂಬುತ್ತೇನೆ, ಇಚ್ಛಿಸುತ್ತೇನೆ ಮತ್ತು ಪ್ರೀತಿಸುತ್ತೇನೆ' ಎಂದನು. ಇತರ ಸ್ತ್ರೀಯರೂ ಹಾಗೆಯೇ ಹೇಳಿದರು. ಕುಂದಲತೆಯೊಬ್ಬಳು ಮಾತ್ರ ಅದೆಲ್ಲವೂ ಸುಳ್ಳೆಂದೂ ತಾನು ಅದನ್ನು ನಂಬುವುದೂ ಇಚ್ಛಿಸುವುದೂ ಪ್ರೀತಿಸುವುದೂ ಇಲ್ಲವೆಂದೂ ಹೇಳಿದಳು. ಈ ವಿಷಯವನ್ನೆಲ್ಲಾ ದೊರೆಯೂ ಮಂತ್ರಿಯೂ ಸುವರ್ಣಖುರನೂ ಕೇಳಿ, ಕುಂದಲತೆಯನ್ನು ತಮ್ಮ ಮನಸ್ಸಿನಲ್ಲಿ ದೂಷಿಸುತ್ತಿದ್ದಾರೆ. ಬೆಳಗಾದ ಮೇಲೆ ಆಕೆಯನ್ನು ಕತ್ತೆಯ ಮೇಲೆ ಮೆರ ವಣಿಗೆಮಾಡಿಸಿ, ಗಡಿಪಾರು ಮಾಡಬೇಕೆಂದು ದೊರೆಯು ಹೇಳಿದನು. ದುಷ್ಟರು ಉತ್ತಮಜಾತಿಯಲ್ಲಿ ಹುಟ್ಟಿದರೂ ತಮ್ಮ ದುಷ್ಟತನವನ್ನು ಬಿಡುವುದಿಲ್ಲವೆಂದು ಕಳ್ಳನು ತನ್ನ ಮನಸ್ಸಿನಲ್ಲಿ ಯೋಚಿಸುತ್ತಿದ್ದಾನೆ.

ಚಂದನಾದಪಿ ಸಂಭೂತೋ ದಹತ್ಯೇವ ಹುತಾಶನಃ ।
ವಿಶಿಷ್ಟಕುಲಜಾತೋಽಪಿ ಯಃ ಖಲಃ ಖಲ ಏವ ಸಃ ॥

—ಚಂದನದಿಂದ ಹುಟ್ಟಿದರೂ ಬೆಂಕಿಯು ಸುಟ್ಟೇಸುಡುವುದು. ವಿಶಿಷ್ಟ ವಾದ ವಂಶದಲ್ಲಿ ಜನಿಸಿದರೂ ದುಷ್ಟನು ದುಷ್ಟನೇ ಆಗಿರುತ್ತಾನೆ.

ಇಂತು ಷಷ್ಠಪರಿಚ್ಛೇದವು ಮುಗಿದುದು.

ಸಪ್ತಮಪರಿಚ್ಛೇದ

ಅನಂತರದಲ್ಲಿ ಅರ್ಹದ್ದಾಸಶ್ರೇಷ್ಠಿಯು ನಾಗಶ್ರೀಯ ಮುಖವನ್ನು ನೋಡಿ 'ನಿನಗೆ ಯಾವ ಕಾರಣದಿಂದ ಸಮ್ಯಕ್ತ್ವವುಂಟಾದುದು?' ಎಂದು ಪ್ರಶ್ನೆಮಾಡಿದನು. ಅದಕ್ಕೆ ನಾಗಶ್ರೀಯು ಹೇಳುತ್ತಾಳೆ:

"ಕಾಶೀದೇಶದಲ್ಲಿ ವಾರಣಾಸೀನಗರದಲ್ಲಿ ಚಂದ್ರವಂಶೋದ್ಭೂತನಾದ ಜಿತಾರಿಯೆಂಬ ರಾಜನು ರಾಜ್ಯವಾಳುತ್ತಿದ್ದಾನೆ. ಕನಕಚಿತ್ರೆಯೆಂಬುವಳು ಆತನ ಪಟ್ಟಮಹಿಷಿ. ಆ ರಾಜದಂಪತಿಗಳಿಗೆ ಮುಂಡಿಕೆಯೆಂಬುವಳು ಮಗಳು. ಆಕೆಯು ಯಾವಾಗಲೂ ಮಣ್ಣನ್ನು ತಿನ್ನುತ್ತಿರುವುದರಿಂದ ಬಹು ರೋಗಿಷ್ಠೆ ಯಾದಳು. ಜಿತಾರಿ ರಾಜನಿಗೆ ಸುದರ್ಶನನೆಂಬುವನು ಮಂತ್ರಿ. ಸುದರ್ಶನೆ ಯೆಂಬುವಳು ಆತನ ಪತ್ನಿ. ಒಂದಾನೊಂದು ಕಾಲದಲ್ಲಿ ವೃಷಭಶ್ರೀಯೆಂಬ ಆರ್ಯಿಕೆಯು ಮುಂಡಿಕೆಗೆ ಧರ್ಮವನ್ನು ಬೋಧಿಸಿ, ಧಾರ್ಮಿಕಳನ್ನಾಗಿ ಮಾಡಿ ದಳು. ಪರೋಪಕಾರವನ್ನು ಮಾಡುವುದು ಸತ್ಪುರುಷರ ಸ್ವಭಾವವಾಗಿದೆ. ಬಳಿಕ ಮುಂಡಿಕೆಯು ಅಹಿಂಸಾಣುವ್ರತ ಮೊದಲಾದ ಶ್ರಾವಕ ವ್ರತಗಳನ್ನು ಅತಿಚಾರವಿಲ್ಲದೆ ಪರಿಪಾಲಿಸಿದಳು. ಆ ವ್ರತಮಹಿಮೆಯಿಂದ ಆಕೆಯ ರೋಗವು ನಿವಾರಣೆಯಾಗಿ, ಬಹಳ ರೂಪವತಿಯಾದಳು.

ಆಶ್ರಯಸ್ಯ ವಿಶೇಷೇಣ ಜಡೋಽಪಿ ಪಟುತಾಂ ವ್ರಜೇತ್ ॥
ಖಡ್ಗಧಾರಾಶ್ರಿತಂ ತೋಯಂ ಭಿನತ್ತಿ ಗಜಮಸ್ತಕಂ ॥

—ಆಶ್ರಯವಿಶೇಷದಿಂದ ಜಡನೂ (ಜಲವೂ) ಪಟುತ್ವವನ್ನು ಹೊಂದು ವನು. ಖಡ್ಗದ ಧಾರೆಯನ್ನು ಹೊಂದಿದ ನೀರು ಆನೆಯ ಮಸ್ತಕವನ್ನು ಭೇದಿಸುವುದು.

ಆಗ ಮುಂಡಿಕೆಯು ಆ ವೃಷಭಶ್ರೀ-ಆರ್ಯಿಕೆಯನ್ನು ಕುರಿತು, 'ಎಲೈ ತಾಯಿಯೆ! ನಿನ್ನ ಅನುಗ್ರಹದಿಂದ ನಾನು ರೋಗವಿಲ್ಲದವಳೂ ರೂಪವತಿಯೂ ಆದೆನು' ಎಂದಳು. ಆ ಮಾತನ್ನು ಕೇಳಿ ಆರ್ಯಿಕೆಯು ಹೇಳುತ್ತಾಳೆ–'ಎಲೈ ಮಗಳೇ! ನಿರ್ದುಷ್ಟವಾದ ವ್ರತವನ್ನು ಪರಿಪಾಲಿಸುವವನು ಸ್ವರ್ಗಾದಿ ಸುಖಕ್ಕೆ ಭಾಜನನಾಗುವನು. ರೂಪವಂತನಾಗುವುದೇನು ವಿಶೇಷ?

ವ್ರತಾನಿ ಸಮ್ಯಕ್ಪ್ರತಿಪಾಲಯನ್ನರೋ ನರೇಂದ್ರದೇವೇಂದ್ರ-
ಮುನೀಂದ್ರಸಂಪದಂ ।
ಸಮಾಪ್ಯ ಕೈವಲ್ಯವಿಭೂತಿಭಾಗ್ಭವೇತ್ಸ ಸಿದ್ಧಿವಧ್ವಾಃ
ಕುಚಕುಂಭಪಲ್ಲವಃ ॥

—ವ್ರತಗಳನ್ನು ಚೆನ್ನಾಗಿ ಪರಿಪಾಲನಮಾಡುವ ಮನುಷ್ಯನು ನರೇಂದ್ರ, ದೇವೇಂದ್ರ, ಮುನೀಂದ್ರ-ತೀರ್ಥಂಕರರ ಸಂಪತ್ತಿಯನ್ನು ಹೊಂದಿ, ಸಿದ್ಧಿಯೆಂಬ ವಧುವಿನ ಕುಚಗಳೆಂಬ ಕುಂಭಗಳಿಗೆ ತಳಿರಾಗಿ, ಕೈವಲ್ಯವಿಭೂತಿಗೆ ಪಾತ್ರನಾಗುವನು.'

ಜಿತಾರಿರಾಜನು ತನ್ನ ಮಗಳು ಆರೋಗ್ಯಲಾಭವನ್ನು ಹೊಂದಿ, ರೂಪವತಿಯಾದುದನ್ನು ನೋಡಿ ಸಂತುಷ್ಟನಾಗಿ ಆಕೆಯ ವಿವಾಹಕ್ಕೋಸ್ಕರ ಸ್ವಯಂವರವನ್ನು ಏರ್ಪಡಿಸಿ, ಎಲ್ಲಾ ರಾಜಕುಮಾರರನ್ನು ಕರೆಯಿಸಿ, ಆಕೆಗೆ ತೋರಿಸಿದನು. ಆದರೆ ಆಕೆಯ ಮನಸ್ಸಿಗೆ ಯಾರೂ ಸರಿತೋರಲಿಲ್ಲ. ಆ ರಾಜಪುತ್ರರೆಲ್ಲ ತಂತಮ್ಮ ಸ್ಥಾನಗಳಿಗೆ ಹೊರಟುಹೋದರು.

ಒಂದಾನೊಂದು ಕಾಲದಲ್ಲಿ ಓಢ್ರದೇಶದ ಚಕ್ರಕೂಟವೆಂಬ ನಗರದಲ್ಲಿ ದಾನಶೂರನೂ ರೂಪಲಾವಣ್ಯಾದಿ ಗುಣವಂತನೂ ಸಮಸ್ತವಸ್ತು ಪರಿಪೂರ್ಣನೂ ಆದ ಭಗದತ್ತನೆಂಬ ರಾಜನಿದ್ದನು. ಆದರೆ ಅವನು ಹೀನಜಾತಿಯವನಾಗಿದ್ದನು. ಲಕ್ಷ್ಮೀಮತಿಯೆಂಬುವಳು ಆತನ ಪತ್ನಿ. ಸುಬುದ್ಧಿಯೆಂಬುವನು ಮಂತ್ರಿ. ಗುಣವತಿಯೆಂಬುವಳು ಆತನ ಪತ್ನಿ. ಆ ಭಗದತ್ತರಾಜನು ಈ ಮುಂಡಿಕೆಯನ್ನು ವಿವಾಹಮಾಡಿಕೊಳ್ಳಬೇಕೆಂದು ಯೋಚಿಸಿ, ಜಿತಾರಿಯನ್ನು ಕೇಳಿದನು. ಅವನು ಭಗದತ್ತನನ್ನು ಕುರಿತು 'ಎಲೌ ನೀಚಕುಲದವನೇ ! ಉತ್ತಮ ಕುಲದವರಾದ ರಾಜಪುತ್ರರನ್ನು ಬಿಟ್ಟು, ಪಾಪಿಷ್ಠನಾದ ನಿನಗೆ ಮಗಳನ್ನು ಹೇಗೆ ಕೊಡಲಿ ?' ಎಂದನು. ಆ ಮಾತನ್ನು ಕೇಳಿ ಭಗದತ್ತನು ಹೇಳುತ್ತಾನೆ'–ಎಲೈ ರಾಜನೇ ! ಗುಣವಿರಬೇಕು. ಜನ್ಮದಿಂದೇನು ?

ಕೌಶೇಯಂ ಕ್ರಿಮಿಜಂ ಸುವರ್ಣಮುಪಲಾದ್ದೂರ್ವಾ ಚ
ಗೋಲೋಮಿತಃ ।
ಪಂಕಾತ್ತಾಮರಸಂ ಶಶಾಂಕ ಉದಧೇರಿಂದೀವರಂ ಗೋಮಯಾತ್ ॥

ಕಾಷ್ಠಾದಗ್ನಿರಹೇಃ ಫಣಾದಪಿ ಮಣಿರ್ಗೋಪಿತ್ತಗೋರೋಚನಾ ।
ಪ್ರಾಕಾಶ್ಯಂ ಸ್ವಗುಣೋದಯೇ ಹಿ ಗುಣಿನೋ ಗಚ್ಛಂತಿ ಕಿಂ ಜನ್ಮನಾ॥

—ಕ್ರಿಮಿಯಿಂದ ರೇಶ್ಮೆಯೂ ಕಲ್ಲಿನಿಂದ ಬಂಗಾರವೂ ಬೀಳುಗರಿಕೆಯಿಂದ ಗರಿಕೆಯೂ ಕೆಸರಿನಿಂದ ತಾವರೆಯೂ ಸಮುದ್ರದಿಂದ ಚಂದ್ರನೂ ಗೋಮಯದಿಂದ ಕನ್ನೈದಿಲೆಯೂ ಕಟ್ಟಿಗೆಯಿಂದ ಬೆಂಕಿಯೂ ಹಾವಿನ ಹೆಡೆಯಿಂದ ರತ್ನವೂ ಹುಟ್ಟುತ್ತದೆ. ಗೋವಿನ ಪಿತ್ತವಿಕಾರವೇ ಗೋರೋಚನವಾಗುವುದು. ಗುಣವುಳ್ಳ ವಸ್ತುಗಳು ತಮ್ಮ ಗುಣಾವಿರ್ಭಾವದಲ್ಲಿ ಪ್ರಕಾಶವನ್ನು ಹೊಂದುವುವು. ಉತ್ಪತ್ತಿಯಿಂದೇನು ?'

ಭಗದತ್ತನ ಮಾತನ್ನು ಕೇಳಿ ಜಿತಾರಿಯು 'ಎಲೌ ನೀಚನೇ ! ನಿನ್ನ ಇಷ್ಟಾರ್ಥವನ್ನು ಯುದ್ಧದಲ್ಲಿ ಕೊಡುವೆನು' ಎಂದನು. ಆ ಮಾತನ್ನು ಕೇಳಿ ಭಗದತ್ತನು ಬಹಳ ಕುಪಿತನಾಗಿ ಜಿತಾರಿಯ ಮೇಲೆ ಯುದ್ಧಕ್ಕೆ ಸನ್ನದ್ಧನಾದನು. ಆಗ ಭಗದತ್ತನ ಮಂತ್ರಿ–ಸುಬುದ್ಧಿಯು ಭಗದತ್ತನನ್ನು ಕುರಿತು, ಯುದ್ಧಸಾಮಗ್ರಿಯನ್ನೆಲ್ಲಾ ಅಣಿಮಾಡಿಕೊಂಡು ಯುದ್ಧಕ್ಕೆ ಹೋಗಬೇಕೆಂದೂ ಹಾಗಿಲ್ಲದಿದ್ದರೆ ನಾಶವು ಸಂಭವಿಸುವುದೆಂದೂ ಹಿತೋಕ್ತಿಯನ್ನು ನುಡಿದನು.

ಸ್ವಕೀಯಬಲಮಜ್ಞಾತ್ವಾ ಸಂಗ್ರಾಮಾರ್ಥಂ ತು ಯೋ ನರಃ ।
ಗಚ್ಛತ್ಯಭಿಮುಖೋ ನಾಶಂ ಯಾತಿ ವಹ್ನೌ ಪತಂಗವತ್ ॥

—ತನ್ನ ಬಲವನ್ನು ತಿಳಿಯದೆ ಶತ್ರುವಿಗೆ ಇದಿರಾಗಿ ಯುದ್ಧಕ್ಕೆ ಹೋಗುವವನು ಬೆಂಕಿಯಲ್ಲಿ ಪತಂಗದಂತೆ ನಾಶವನ್ನು ಹೊಂದುವನು.

ಸೂರ್ಯನು ತೇಜಸ್ವಿಯಾಗಿದ್ದರೂ ಕಿರಣಗಳಿಂದ ರಹಿತನಾದರೆ ಹೇಗೆ ಶೋಭಿಸುವುದಿಲ್ಲವೋ ಹಾಗೆ ಭೃತ್ಯರಿಲ್ಲದ ದೊರೆಯು ಶೋಭಿಸುವುದಿಲ್ಲ, ಸಮೂಹದಲ್ಲಿ ಬಲವಿದೆ. ಹುಲ್ಲುಗಳಿಂದ ಮಾಡಲ್ಪಟ್ಟ ಹಗ್ಗದಿಂದ ಆನೆಯನ್ನಾದರೂ ಕಟ್ಟಬಹುದು.

ಏವಂ ಜ್ಞಾತ್ವಾ ನರೇಂದ್ರೇಣ ಭೃತ್ಯಾ ಕಾರ್ಯಾ ವಿಚಕ್ಷಣಾಃ ।
ಕುಲೀನಾಃ ಶೌರ್ಯಸಂಯುಕ್ತಾಃ ಶಕ್ತಾ ಭಕ್ತಾಃ ಕ್ರಮಾಗತಾಃ ॥

ದೊರೆಯು ಈ ರೀತಿಯಾಗಿ ತಿಳಿದು, ಚತುರರೂ ಕುಲೀನರೂ ಶೌರ್ಯವುಳ್ಳವರೂ ಸಮರ್ಥರೂ ಭಕ್ತರೂ ಪರಂಪರೆಯಿಂದ ಬಂದವರೂ ಆದ ಭೃತ್ಯರನ್ನು ಸಂಗ್ರಹಿಸಿಕೊಳ್ಳಬೇಕು.

ಮಂತ್ರಿಯ ಮಾತನ್ನು ಕೇಳಿ ಭಗದತ್ತನು 'ಎಲೈ ಸುಬುದ್ಧಿಯೇ! ನೀನು ಹೇಳಿದ ಹಿತೋಕ್ತಿಯೆಲ್ಲವೂ ಸತ್ಯವಾದುದು. ಹಿತಚಿಂತಕರ ಮಾತನ್ನು ಕೇಳಬೇಕು. ಹಾಗಿಲ್ಲದಿದ್ದರೆ ಹಾನಿಯುಂಟಾಗುವುದು. ನಾನು ಯುದ್ಧಸಾಮಗ್ರಿಯನ್ನೆಲ್ಲಾ ಅಣಿಮಾಡಿಕೊಂಡು ಹೊರಡಲುದ್ಯುಕ್ತನಾಗಿರುವುದಾಗಿದೆ' ಎಂದನು. ಆಗ ಲಕ್ಷ್ಮೀಮತಿಯು ಪತಿಯನ್ನು ಕುರಿತು ಹೇಳುತ್ತಾಳೆ—'ಎಲೈ ಸ್ವಾಮಿಯೆ! ವ್ಯರ್ಥವಾಗಿ ದುರಾಗ್ರಹವನ್ನೇಕೆ ಮಾಡುತ್ತೀರಿ? ಉಭಯರಿಗೂ ಒಪ್ಪಿಗೆಯಿದ್ದರೆ ವಿವಾಹವಾಗಲಿ, ಸ್ನೇಹ ಮೊದಲಾದುದಾಗಲಿ ಆಗುವುದೊಳ್ಳೆಯದು. ಹಾಗಲ್ಲದೆ ಅಯುಕ್ತವಾದ ಕಾರ್ಯವನ್ನು ಮಾಡಬಾರದು. ಅವ್ಯಾಪಾರಗಳಲ್ಲಿ ವ್ಯಾಪಾರವನ್ನು ಮಾಡಲಿಚ್ಛಿಸುವ ಮನುಷ್ಯನು ಕೀಲನ್ನು ಕಿತ್ತ ಮಂಗನಂತೆ, ನಾಶವನ್ನು ಹೊಂದುತ್ತಾನೆ.'

ಭಗದತ್ತನು ಹೇಳುತ್ತಾನೆ—'ಎಲೌ ಮೂರ್ಖಳೇ! ನಾನು ದುರಾಗ್ರಹವನ್ನು ಮಾಡುವುದರಲ್ಲಿ ಕಾರಣವಿದೆ. ಜಿತಾರಿಯು ಯುದ್ಧದ ಮಧ್ಯದಲ್ಲಿ ಎಲ್ಲವನ್ನೂ ನನಗೆ ಕೊಡುವುದಾಗಿ ಹೇಳಿದ್ದಾನೆ. ಈಗ ನಾನು ಹಾಗೆ—ದುರಾಗ್ರಹವನ್ನು ಮಾಡದಿದ್ದರೆ ಬೇರೆ ದೊರೆಗಳಿಗೆ ನಾನು ಮಾನ್ಯನಾಗುವುದಿಲ್ಲ.

ಯಜ್ಜೀವ್ಯತೇ ಕ್ಷಣಮಪಿ ಪ್ರಥಿತೈರ್ಮನುಷ್ಯೈಃ ।
ವಿಜ್ಞಾನಶೌರ್ಯವಿಭವಾದಿಗುಣೈಃ ಸಮೇತೈಃ ॥
ತನ್ನಾಮ ಜೀವಿತಫಲಂ ಪ್ರವದಂತಿ ಸಂತಃ ।
ಕಾಕೋಪಿ ಜೀವತಿ ಚಿರಂ ಚ ಬಲಿಂ ಚ ಭುಙ್ಕ್ತೇ ॥

—ಪ್ರಸಿದ್ಧರಾದ ಮನುಷ್ಯರು ವಿಜ್ಞಾನ, ಶೌರ್ಯ, ಸಂಪತ್ತಿ ಮೊದಲಾದ ಗುಣಗಳಿಂದ ಕೂಡಿದವರಾಗಿ ಒಂದು ಕ್ಷಣಕಾಲದವರೆಗೆ ಜೀವಿಸಿದರೂ ಅದೇ ಜೀವಿತದ ಫಲವೆಂದು ಸತ್ಪುರುಷರು ಹೇಳುತ್ತಾರೆ. ಕಾಗೆಯೂ ಬಹುಕಾಲದವರೆಗೆ ಬದುಕುತ್ತದೆ. ಆಹಾರವನ್ನೂ ತಿನ್ನುತ್ತದೆ.'

ಬಳಿಕ ಭಗದತ್ತನು ಬಹುಸಂಭ್ರಮದಿಂದ ಯುದ್ಧಕ್ಕೆ ಹೊರಟನು. ಆಗ ಲಕ್ಷ್ಮೀಮತಿಯು 'ಯಾವುದು ಆಗಬೇಕಾಗಿರುವುದೋ ಅದು ಆಗುವುದು' ಎಂದಳು. ಭಗದತ್ತನು ಹೊರಡುವ ಕಾಲದಲ್ಲಿ ಕೆಲವು ಶುಭಶಕುನಗಳಾದುವು.

ದಧಿದೂರ್ವಾಕ್ಷತಪಾತ್ರಂ ಜಲಕುಂಭಶ್ಚೇಕ್ಷುದಂಡಪದ್ಮಾನಿ ।
ಸೂನುವತೀ ಸ್ತ್ರೀ ವೀಣಾಪ್ರಭೃತಿಕಮಗ್ರೇ ಸುದರ್ಶನಂ ಜಾತಂ ॥

—ಮೊಸರು, ಗರಿಕೆ, ಅಕ್ಷತಪಾತ್ರ, ನೀರುತುಂಬಿರುವ ಕಲಶ, ಕಬ್ಬಿನ ಜಲ್ಲೆ, ತಾವರೆ, ಮಗುವನ್ನು ಎತ್ತಿಕೊಂಡಿರುವ ಹೆಂಗಸು, ವೀಣೆ ಮೊದಲಾದುದು ಪ್ರಯಾಣಕಾಲದಲ್ಲಿ ಮುಂದೆ ಬಂದರೆ ಶುಭವಸ್ತುಗಳ ದರ್ಶನವಾದುದೆಂದು ತಿಳಿಯಬೇಕು.

ಭಗದತ್ತನು ಸೈನ್ಯಸಮೇತನಾಗಿ ಯುದ್ಧಕ್ಕೆ ಬಂದ ಸಮಾಚಾರವನ್ನು ಒಬ್ಬ ಮನುಷ್ಯನು ಜಿತಾರಿರಾಜನಿಗೆ ಗುಟ್ಟಾಗಿ ತಿಳುಹಿದನು. ಆ ಮಾತನ್ನು ಕೇಳಿ ಜಿತಾರಿರಾಜನು ಗರ್ವದಿಂದ 'ಎಲೌ ಪ್ರಾಣಿಯೇ! ಭೂಮಂಡಲದಲ್ಲಿ ನನ್ನ ಮೇಲೆ ಯುದ್ಧಕ್ಕೆ ಬರುವವನಿದ್ದಾನೆಯೇ? ಜಿತಾರಿಯೆಂದು ನನ್ನ ಹೆಸರು.

ದೃಷ್ಟಂ ಶ್ರುತಂ ನ ಕ್ಷಿತಿಲೋಕಮಧ್ಯೇ ಮೃಗಾ ಮೃಗೇಂದ್ರೋಪರಿ ಸಂಚಲಂತಿ ।
ವಿಧುಂತುದಸ್ಯೋಪರಿ ಚಂದ್ರಮಾರ್ಕೌ ಕಿಂ ವಾ ಬಿಡಾಲೋಪರಿ ಮೂಷಕಾಃ ಸ್ಯುಃ ॥
ಕಿಂ ವೈನತೇಯೋಪರಿ ಕಾದ್ರವೇಯಾಃ ಕಿಂ ಸಾರಮೇಯೋಪರಿ ಲಂಬಕರ್ಣಾಃ ॥
ಕಿಂ ವೈ ಕೃತಾಂತೋಪರಿ ಭೂತವರ್ಗಾಃ ಕಿಂ ಕುತ್ರ ಸೇನೋಪರಿ ವಾಯಸಾಃ ಸ್ಯುಃ ॥

—ಸಿಂಹದ ಮೇಲೆ ಜಿಂಕೆಗಳೂ ರಾಹುವಿನ ಮೇಲೆ ಚಂದ್ರಸೂರ್ಯರೂ ಬೆಕ್ಕಿನ ಮೇಲೆ ಇಲಿಗಳೂ ಗರುಡನ ಮೇಲೆ ಸರ್ಪಗಳೂ ನಾಯಿಯ ಮೇಲೆ ಆಡುಗಳೂ ಯಮನ ಮೇಲೆ ಪ್ರಾಣಿಸಮೂಹಗಳೂ ಸೇನೆಯ ಮೇಲೆ ಕಾಗೆ

ಗಳೂ ಭೂಲೋಕದ ಮಧ್ಯದಲ್ಲಿ ಎಲ್ಲಿಯಾದರೂ ಆಕ್ರಮಣವನ್ನು ಮಾಡಿರುವುದನ್ನು ಕಂಡು ಕೇಳಿಯುಂಟೋ ?

ಸೂರ್ಯನು ಉದಯಿಸುವ ವರೆಗೆ ಕತ್ತಲೆ' ಎಂದನು. ಹೀಗೆ ಜಿತಾರಿಯು ಹೇಳುತ್ತಿರುವಷ್ಟರಲ್ಲಿ ಭಗದತ್ತನು ಗುಪ್ತವಾಗಿ ಬಂದು ವಾರಾಣಸೀ ನಗರವನ್ನು ಮುತ್ತಿದನು. ಆಗ ನಗರದಲ್ಲೆಲ್ಲಾ ಕೋಲಾಹಲವೆದ್ದಿತು. ಅದನ್ನು ಕೇಳಿ ಜಿತಾರಿರಾಜನು ತ್ವರೆಯಿಂದ ಚತುರಂಗಬಲದೊಡನೆ ಹೊರಟನು. ಆಗ ಕೆಲವು ಅಪಶಕುನಗಳಾದುವು.

ಅಕಾಲವೃಷ್ಟಿಸ್ತ್ವಥ ಭೂಮಿಕಂಪೋ ನಿರ್ಘಾತ ಉಲ್ಕಾಪತನಂ ಪ್ರಚಂಡಂ ।
ಇತ್ಯಾದ್ಯನಿಷ್ಟಾನಿ ತತೋ ಬಭೂವುರ್ನಿವಾರಣಾರ್ಥೇ ಸುಹೃದೋ ಯಥೈವ ॥

—ಅಕಾಲದಲ್ಲಿ ಮಳೆಯೂ ಭೂಕಂಪವೂ ಸಿಡಿಲೂ ಪ್ರಚಂಡವಾದ ಉಲ್ಕಾಪಾತವೂ ಇವೇ ಮೊದಲಾದ ಅನಿಷ್ಟಗಳು, ಮಿತ್ರರು ತಡೆಯುವಂತೆ, ಉಂಟಾದುವು.

ಆ ಸಂದರ್ಭದಲ್ಲಿ ಸುದರ್ಶನ-ಮಂತ್ರಿಯು ಜಿತಾರಿಯನ್ನು ಕುರಿತು ಹೇಳುತ್ತಾನೆ-'ಎಲೈ ದೇವಾ ! ಭಗದತ್ತನಿಗೆ ಮಗಳನ್ನು ಕೊಟ್ಟು ಸುಖವಾಗಿರು.

ರಕ್ಷಂತಿ ದೇಶಂ ಗ್ರಾಮೇಣ ಗ್ರಾಮಮೇಕಂ ಕುಲೇನ ಚ ।
ಕುಲಮೇಕೇನ ಚಾತ್ಮಾನಂ ಪೃಥ್ವೀತ್ಯಾಗೇನ ಪಂಡಿತಾಃ ॥

—ಜ್ಞಾನಿಗಳು ಆಪತ್ಕಾಲದಲ್ಲಿ ಒಂದು ಗ್ರಾಮವನ್ನು ತ್ಯಜಿಸಿ ದೇಶವನ್ನೂ ಒಂದು ವಂಶವನ್ನು ತ್ಯಜಿಸಿ ಗ್ರಾಮವನ್ನೂ ಒಂದು ವ್ಯಕ್ತಿಯನ್ನು ತ್ಯಜಿಸಿ ವಂಶವನ್ನೂ ಪೃಥ್ವಿಯನ್ನು ತ್ಯಜಿಸಿ ತಮ್ಮನ್ನೂ ಕಾಪಾಡಿಕೊಳ್ಳುತ್ತಾರೆ.'

ಮಂತ್ರಿಯ ಮಾತನ್ನು ಕೇಳಿ ಜಿತಾರಿಯು ಹೇಳುತ್ತಾನೆ-'ಎಲೈ ಮಂತ್ರಿಯೇ ! ಏತಕ್ಕೆ ಹೆದರುವೆ ? ನನ್ನ ಕತ್ತಿಯ ಪೆಟ್ಟನ್ನು ಸಹಿಸುವುದಕ್ಕೆ ಯಾವನು ಸಮರ್ಥನು ?

ಕೋಽಸ್ಮಿನ್ ಲೋಕೇ ಶಿರಸಿ ಸಹತೇ ಯಃ ಪುಮಾನ್ ವಜ್ರಘಾತಂ ।
ಕೋಽಸ್ತೀದೃಗ್ಯಸ್ತರತಿ ಜಲಧಿಂ ಬಾಹುದಂಡೈರಪಾರಂ ॥
ಕೋಽಸ್ತ್ಯಸ್ಮಿನ್ಯೋ ದಹನಶಯನೇ ಸೇವತೇ ಸೌಖ್ಯನಿದ್ರಾಂ ।
ಗ್ರಾಸೈರ್ಗ್ರಾಸೈರ್ಗಿಲತಿ ಸತತಂ ಕಾಲಕೂಟಂ ಚ ಕೋಽಪಿ ॥

—ಈ ಲೋಕದಲ್ಲಿ ಯಾವ ಮನುಷ್ಯನು ತಲೆಯ ಮೇಲೆ ವಜ್ರಾಯುಧದ ಪೆಟ್ಟನ್ನು ಸಹಿಸುತ್ತಾನೆ ? ಅಪಾರವಾದ ಸಮುದ್ರವನ್ನು ಭುಜದಂಡಗಳಿಂದ ದಾಟುವವನು ಯಾವನಿದ್ದಾನೆ ? ಬೆಂಕಿಯ ಹಾಸಿಗೆಯಲ್ಲಿ ಸುಖನಿದ್ರೆಯನ್ನು ಹೊಂದುವವನು ಯಾವನಿದ್ದಾನೆ ? ಯಾವಾಗಲೂ ತುತ್ತುಗಳೊಡನೆ ಕಾಲಕೂಟ-ವಿಷವನ್ನು ಯಾವನಾದರೂ ನುಂಗುವನೇ ?

ಮಂತ್ರಿಯು ಅಸಮಂಸನ್ನಾಹಯುಕ್ತವಾದ ಶತ್ರು ಸೈನ್ಯವನ್ನು ನೋಡಿ, ದೊರೆಯನ್ನು ಕುರಿತು-'ಸ್ವಾಮಿಯೇ ! ಬಹಳ ಸೈನ್ಯವು ಬಂದಿದೆ. ನಮಗೆ ಯುದ್ಧವು ಬೇಡ' ಎಂದನು. 'ಅದಕ್ಕೆ ಜಿತಾರಿಯು 'ಸಿದ್ಧಿಯೂ ಜಯವೂ ಶಕ್ತಿಯಿಂದಲ್ಲದೆ ಹೆಚ್ಚಾದ ಸಾಮಗ್ರಿಯಿಂದಲ್ಲ' ಎಂದನು. ಅಷ್ಟರಲ್ಲಿ ಭಗದತ್ತನು ಯುದ್ಧಸನ್ನದ್ಧನಾದುದನ್ನು ನೋಡಿ, ಅವನ ಮಂತ್ರಿ ಸುಬುದ್ಧಿಯು ಮೊದಲು ದೂತನನ್ನು ಕಳುಹಿಸಿ, ಶತ್ರುಸೈನ್ಯದ ಬಲಾಬಲವನ್ನೂ ಸಂಖ್ಯೆಯನ್ನೂ ತಿಳಿಯಬೇಕೆಂದೂ ನಂತರ ದೂತನನ್ನು ಕಳುಹಿಸಿ, ಇದಿರಾಳಿಯು ಸಾಮೋಪಾಯಕ್ಕೆ ಒಪ್ಪದಿದ್ದರೆ, ಬಳಿಕ ಯುದ್ಧವನ್ನು ಮಾಡುವುದು ರಾಜನೀತಿಯೆಂದೂ ಆದುದರಿಂದ ದೂತನನ್ನು ಕಳುಹಿಸಬೇಕೆಂದೂ ಭಗದತ್ತನಿಗೆ ಹೇಳಿದನು.

ಪುರಾ ದೂತಃ ಪ್ರಕರ್ತವ್ಯಃ ಪಶ್ಚಾದ್ಯುದ್ಧಂ ವಿಧೀಯತೇ ।
ದೂತೇನ ಸಬಲಂ ಸೈನ್ಯಂ ನಿರ್ಬಲಂ ಜ್ಞಾಯತೇ ಧ್ರುವಂ ॥

—ಮೊದಲು ದೂತನನ್ನು ಕಳುಹುವ ವ್ಯವಸ್ಥೆ ಮಾಡಬೇಕು. ಆಮೇಲೆ ಯುದ್ಧವನ್ನು ಮಾಡಬೇಕು. ಶತ್ರುಸೈನ್ಯವು ಬಲಿಷ್ಠವಾಗಿದೆಯೋ ಬಲಹೀನವಾಗಿದೆಯೋ ಎಂಬುದು ದೂತನಿಂದ ನಿಶ್ಚಿತವಾಗಿ ಗೊತ್ತಾಗುವುದು.

ಮಂತ್ರಿಯು ಹಿತೋಕ್ತಿಯನ್ನು ಕೇಳಿ ಭಗದತ್ತನು ದಿವಾಕರನೆಂಬ ದೂತನನ್ನು ಜಿತಾರಿಯ ಬಳಿಗೆ ಕಳುಹಿಸಿದನು. ದೂತಲಕ್ಷಣಗಳೆಲ್ಲ ದಿವಾಕರನಲ್ಲಿದ್ದಿತು.

ಮೇಧಾವೀ ವಾಕ್ಪಟುಶ್ಚೈವ ಪರಚಿತ್ತೋಪಲಕ್ಷಕಃ ।
ಧೀರೋ ಯಥೋಕ್ತವಾದೀ ಚ ದೂತಸ್ಯೈತದ್ಧಿ ಲಕ್ಷಣಂ ॥

—ಬುದ್ಧಿಶಾಲಿಯೂ ವಾಚಾಳುವೂ ಪರೇಂಗಿತವನ್ನು ತಿಳಿಯುವವನೂ ಧೈರ್ಯಶಾಲಿಯೂ ಸತ್ಯವನ್ನು ನುಡಿಯುವವನೂ ಆದ ಮನುಷ್ಯನು ದೂತನಾಗುವುದಕ್ಕೆ ಯೋಗ್ಯನು. ಇದೇ ದೂತನ ಲಕ್ಷಣವು.

ದಿವಾಕರನು ಜಿತಾರಿ ರಾಜನ ಬಳಿಗೆ ಹೋಗಿ ಹೇಳುತ್ತಾನೆ–'ಪ್ರಭುವೇ! ನಮ್ಮ ದೊರೆಗೆ ನಿನ್ನ ಮಗಳು–ಮುಂಡಿಕೆಯನ್ನು ಕೊಟ್ಟು ಸುಖದಿಂದ ರಾಜ್ಯವನ್ನಾಳಿಕೊಂಡಿರು. ಹಾಗೆ ಮಾಡದಿದ್ದರೆ ನಿನಗೆ ನಾಶವು ಸಂಭವಿಸುವುದು.

ಅನುಚಿತಕರ್ಮಾರಂಭಃ ಪ್ರಕೃತಿವಿರೋಧೋ ಬಲೀಯಸಾ ಸ್ಪರ್ಧಾ ।
ಪ್ರಮದಾಜನವಿಶ್ವಾಸೋ ಮೃತ್ಯೋರ್ದ್ವಾರಾಣಿ ಚತ್ವಾರಿ ॥

—ಅನುಚಿತವಾದ ಕಾರ್ಯವನ್ನು ಪ್ರಾರಂಭಿಸುವುದು, ಪ್ರಜೆಗಳೊಡನೆ ವಿರೋಧ, ಬಲಿಷ್ಠನೊಡನೆ ಹೋರಾಟ, ಸ್ತ್ರೀಜನರಲ್ಲಿ ನಂಬಿಕೆ ಇವು ನಾಲ್ಕು ಮೃತ್ಯುವಿನ ಬಾಗಿಲುಗಳು'.

ದೂತನ ಈ ಮಾತುಗಳನ್ನು ಕೇಳಿ ಜತಾರಿಯು ಕುಪಿತನಾಗಿ 'ಪಶ್ಚಾತ್ತಾಪಕ್ಕೆ ಯೋಗ್ಯನೇ? ಏನು ಒದರುವೆ? ಯುದ್ಧದಲ್ಲಿ ನನ್ನ ಮುಂದೆ ನಿಲ್ಲುವವರಾರು? ಸಿಂಹದ ಮುಂದೆ ಜಿಂಕೆಗಳು ನಿಲ್ಲಬಲ್ಲುವೇ? ಏನಾಗಬೇಕಾಗಿರುವುದೋ ಅದಾಗಲಿ. ಮಗಳನ್ನು ಕೊಡುವುದಿಲ್ಲವೆಂಬ ನನ್ನ ಪ್ರತಿಜ್ಞೆಯನ್ನು ಬಿಡುವುದಿಲ್ಲ.

ಮಾರ್ತಂಡಾನ್ವಯಜನ್ಮನಾ ಕ್ಷಿತಿಭೃತಾ ಚಾಂಡಾಲಸೇವಾ ಕೃತಾ ।
ರಾಮೇಣಾದ್ಭುತವಿಕ್ರಮೇಣ ಗಹನಾಃ ಸಂಸೇವಿತಾಃ ಕಂದರಾಃ ॥
ಭೀಮಾದ್ಯೈಃ ಶಶಿವಂಶಜೈರ್ನೃಪವರೈರ್ದೈನ್ಯಂ ಕೃತಂ ರಂಕವತ್ ।
ಸ್ವಾಂ ಭಾಷಾಂ ಪ್ರತಿಪಾಲನಾಯ ಪುರುಷೈಃ ಕಿಂ ಕಿಂ ನ
ಚಾಂಗೀಕೃತಂ ॥

—ಸೂರ್ಯವಂಶೋತ್ಪನ್ನನಾದ ಹರಿಶ್ಚಂದ್ರರಾಜನು ಚಾಂಡಲನ ಸೇವೆಯನ್ನು ಮಾಡಿದನು. ಅದ್ಭುತ ಪರಾಕ್ರಮಿಯಾದ ರಾಮನು ಗಹನವಾದ ಗುಹೆಗಳಲ್ಲಿ ವಾಸಮಾಡಿದನು. ಚಂದ್ರವಂಶೋತ್ಪನ್ನರಾದ ಭೀಮಸೇನ ಮೊದಲಾದ ಶ್ರೇಷ್ಠ ರಾಜರುಗಳು, ಕೃಪಣರಂತೆ ದೈನ್ಯವನ್ನಾಚರಿಸಿದರು. ತಮ್ಮ ಪ್ರತಿಜ್ಞಾಪಾಲನೆಗೋಸ್ಕರ ಪುರುಷರು ಯಾವ ಯಾವ ಕಷ್ಟವನ್ನು ಅಂಗೀಕರಿಸಲಿಲ್ಲ?

ಈ ಪ್ರಕಾರವಾಗಿ ಹೇಳಿ ಜಿತಾರಿಯು ತನ್ನ ಭಟರನ್ನು ಕರೆದು, ಆ ದೂತನನ್ನು ಕೊಲ್ಲುವಂತೆ ಆಜ್ಞೆಮಾಡಿದನು. ಆಗ ಮಂತ್ರಿಯು ದೂತನನ್ನು ಕೊಲ್ಲುವುದು ರಾಜನೀತಿಗೆ ವಿರುದ್ಧವಾದುದೆಂದೂ ಅಂತಹ ರಾಜನು ಮಂತ್ರಿಸಹಿತನಾಗಿ ನರಕವನ್ನು ಹೊಂದುವನೆಂದೂಹೇಳಿ, ಆ ದೂತನನ್ನು ಹೊರಡಿಸಿ ಕಳುಹಿಸಿದನು. ಅವನು ಭಗದತ್ತನ ಬಳಿಗೆ ಹೋಗಿ, ಜಿತಾರಿಯು ತನ್ನ ಭುಜಬಲದ ದುರಭಿಮಾನದಿಂದ ಯಾರನ್ನೂ ಲಕ್ಷಿಸುವುದಿಲ್ಲವೆಂದು ಹೇಳಿದನು. ಆಗ ಭಗದತ್ತನು ಯುದ್ಧಕ್ಕೆ ಹೋದನು. ಜಿತಾರಿಯೂ ಸರ್ವಸನ್ನಾಹದೊಡನೆ ಇದಿರಾದನು. ಉಭಯಬಲವೂ ಅಣಿಯಾಯಿತು.

ದಿಕ್ಚಕ್ರಂ ಚಲಿತಂ ಭಯೋಜ್ಜಲನಿಧಿರ್ಜಾತೋ ಮಹಾವ್ಯಾಕುಲಃ ।
ಪಾತಾಲೇ ಚಕಿತೋ ಭುಜಂಗಮಪತಿಃ ಕ್ಷೋಣಿಧರಾಃ ಕಂಪಿತಾಃ ॥
ಭ್ರಾಂತಾ ಚ ಪೃಥಿವೀ ಮಹಾವಿಷಧರಾಃ ಕ್ಷ್ವೇಡಂ ವಮಂತ್ಯುತ್ಕಟಂ ।
ವೃತ್ತಂ ಸರ್ವಮನೇಕಧಾ ದಲಪತೇರೇವಂ ಚಮೂನಿರ್ಗಮೇ ॥

—ಸೈನ್ಯಾಧಿಪತಿಯ ಸೈನ್ಯವು ಹೊರಟು ಹೋಗುವಾಗ ದಿಙ್ಮಂಡಲವು ಭಯದಿಂದ ಚಲಿಸಿತು. ಸಮುದ್ರವು ಬಹಳ ವ್ಯಾಕುಲವುಳ್ಳದಾಯಿತು. ಪಾತಾಳದಲ್ಲಿ ಆದಿಶೇಷನು ಬೆಚ್ಚಿದನು. ಪರ್ವತಗಳು ನಡುಗಿದವು. ಭೂಮಿಯಾದರೋ ತಿರುಗಿತು. ದೊಡ್ಡ ಹಾವುಗಳು ತೀಕ್ಷ್ಣವಾದ ವಿಷವನ್ನು ಕಾರಿದವು. ಹೀಗೆಲ್ಲ ಅನೇಕ ಪ್ರಕಾರವಾಗಿ ನಡೆಯಿತು.

ಪವನಗತಿಸಮಾನೈರಶ್ವಯೂಥೈರನಂತೈರ್ಮದಧರಗಜಯೂಥೈ
ರಾಜತೇ ಸೈನ್ಯಲಕ್ಷ್ಮೀಃ ।
ಧ್ವಜಚಮರವರಾಸ್ತ್ರೈರಾವೃತಂ ಖಂ ಸಮಸ್ತಂ
ಪಟುಪಟಹಮೃದಂಗೈರ್ಭೀಮನಾದೈಸ್ತ್ರಿಲೋಕೀ ॥

—ವಾಯುವೇಗಕ್ಕೆ ಸಮಾನವಾದ ಅನೇಕ ಕುದುರೆಗಳಿಂದಲೂ ಮದಗಜಗಳಿಂದಲೂ ಸೈನ್ಯಲಕ್ಷ್ಮಿಯು ಶೋಭಿಸುತ್ತಾಳೆ. ಧ್ವಜಗಳಿಂದಲೂ ಚಾಮರಗಳಿಂದಲೂ ಶ್ರೇಷ್ಠವಾದ ಅಸ್ತ್ರಗಳಿಂದಲೂ ವ್ಯಾಪ್ತವಾದ ಆಕಾಶವೆಲ್ಲ ಶೋಭಿಸುತ್ತದೆ. ಘೋರವಾದ ನಾದವುಳ್ಳ ತಮ್ಮಟೆಗಳಿಂದಲೂ ಮದ್ದಳೆಗಳಿಂದಲೂ ಮೂರು ಲೋಕವು ಶೋಭಿಸುತ್ತದೆ.

ಏಕೇ ನೈ ಹನ್ಯಮಾನಾ ರಣಭುವಿ ಸುಭಟಾ ಜೀವಶೇಷಾಃ ಪತಂತಿ ।
ಹ್ಯೇಕೇ ಮೂರ್ಛಾಂ ಪ್ರಪನ್ನಾಃ ಸ್ಯುರಪಿ ಚ ಪುನರುನ್ಮೂರ್ಛಿತಾ ನೈ ಭವಂತಿ ॥
ಮುಂಚಂತ್ಯೇಕೇಟ್ಟಹಾಸಾನ್ ನಿಜಪತಿಕೃತಸನ್ಮಾನಮಾದ್ಯಂ ಪ್ರಸಾದಂ ।
ಸ್ಮೃತ್ವಾ ಧಾವಂತಿ ಚಾಗ್ರೇ ಜಿತಸಮರಭಯಾಃ ಪ್ರೌಢಿಮಂತೋ ಹಿ ಭೂತ್ವಾ ॥

—ಯುದ್ಧಭೂಮಿಯಲ್ಲಿ ಚೆನ್ನಾಗಿ ಹೊಡೆಯಲ್ಪಟ್ಟ ಕೆಲವು ಒಳ್ಳೆಯ ಭಟರು ಕುಟುಕು ಜೀವವುಳ್ಳವರಾಗಿ ಬೀಳುತ್ತಿದ್ದಾರೆ. ಕೆಲವರು ಮೂರ್ಛೆಯನ್ನು ಹೊಂದಿ ಮತ್ತೆ ಎಚ್ಚೆತ್ತುಕೊಳ್ಳುತ್ತಿದ್ದಾರೆ. ಕೆಲವರು ಮೊದಲು ತಮ್ಮ ಯಜಮಾನನು ಮಾಡಿದ್ದ ಸನ್ಮಾನವನ್ನೂ ಅನುಗ್ರಹವನ್ನೂ ಸ್ಮರಿಸಿಕೊಂಡು, ಅಟ್ಟಹಾಸಗಳನ್ನು ಬಿಟ್ಟು ರಣಭಯವನ್ನು ಜಯಿಸಿ, ಪ್ರೌಢಿಮೆಯುಳ್ಳವರಾಗಿ ಮುಂದೆ ಓಡುತ್ತಿದ್ದಾರೆ.

ಏಕೇ ನೈ ಕಾತರಾಣಾಂ ಸಮರಭಯವಶಾತ್ತ್ರಾಸಮುತ್ಪಾದಯಂತಿ ।
ಹ್ಯೇಕೇ ಸಂಪೂರ್ಣಘಾತೈರುಪಹತವಪುಷೋ ನಾಕನಾರೀಪ್ರಿಯಾಃ ಸ್ಯುಃ ॥
ಏಕೇ ಯೇ ಧೀರಧೈರ್ಯಾ ರಿಪುಹತಜಠರಾ ಲಂಬಮಾನಾಂತ್ರಜಾಲಾ ।
ಘಾತೈಸ್ಸಂಭಿನ್ನದೇಹಾ ಅಪಿ ಭಯರಹಿತಾ ವೈರಿಭಿರ್ಯಾಂತಿ ಯೋದ್ಧುಂ ॥

—ಕೆಲವರು ಯುದ್ಧದ ಭಯದಿಂದ ವ್ಯಾಕುಲವುಳ್ಳವರಿಗೆ ಭಯವನ್ನುಂಟುಮಾಡುತ್ತಾರೆ. ಇನ್ನು ಕೆಲವರು ಹೆಚ್ಚು ಪೆಟ್ಟುಗಳಿಂದ ಗಾಯವಡೆದ ದೇಹವನ್ನು ತ್ಯಜಿಸಿ, ದೇವಾಂಗನೆಯರಿಗೆ ಪತಿಗಳಾಗುತ್ತಾರೆ. ಧೀರರೂ ಧೈರ್ಯವುಳ್ಳವರೂ ಆದ ಮತ್ತೆ ಕೆಲವರು ಶತ್ರುಗಳಿಂದ ಹೊಡೆಯಲ್ಪಟ್ಟ ತಮ್ಮ ಹೊಟ್ಟೆಗಳಿಂದ ಜೋಲುತ್ತಿರುವ ಕರುಳುಗಳುಳ್ಳವರೂ ಪೆಟ್ಟುಗಳಿಂದ ಮೈಗಾಯವಡೆದವರೂ ಆದರೂ ಭಯವಿಲ್ಲದವರಾಗಿ ಶತ್ರುಗಳೊಡನೆ ಯುದ್ಧಕ್ಕೆ ಹೋಗುತ್ತಾರೆ.

ತತ್ರಾಸಿಚ್ಛುರಿಕಾದಿಶಸ್ತ್ರನಿಚಯೋ ಭಾತೀವ ಮೀನಾಕೃತಿಃ ।
ಕೇಶಸ್ನಾಯುಸಿರಾಂತ್ರಜಾಲನಿವಹಃ ಶೈವಾಲವದ್ದೃಶ್ಯತೇ ॥
ಯಾನೀಭೇಂದ್ರಕಲೇವರಾಣಿ ಪತಿತಾನೀದೃಗ್ರಣಾಂಭೋನಿಧೌ ।
ಪೋತಾನೀವ ವಿಭಾಂತಿ ತಾನಿ ರುಧಿರೇ ಚಾ ಸ್ಥೀನಿ ಶಂಖಾ ಇವ ॥

—ಆ ಯುದ್ಧವೆಂಬ ಸಮುದ್ರದಲ್ಲಿ ಕತ್ತಿ, ಚೂರಿ ಮೊದಲಾದ ಶಸ್ತ್ರಗಳ ಸಮೂಹವು ಮೀನಿನಂತೆ ಶೋಭಿಸುತ್ತಿದೆ. ತಲೆಗೂದಲು ಸಣ್ಣ ಮತ್ತು ದೊಡ್ಡನರಗಳು ಕರುಳುಗಳ ರಾಶಿ ಇವುಗಳ ಸಮೂಹವು ಅವಚಿಯಂತೆ ತೋರುತ್ತದೆ. ಬಿದ್ದುಹೋದ ದೊಡ್ಡ ಆನೆಗಳ ಶರೀರಗಳು ಚಿಕ್ಕ ಹಡಗುಗಳಂತೆ ಶೋಭಿಸುತ್ತವೆ. ರಕ್ತದಲ್ಲಿರುವ ಮೂಳೆಗಳು ಶಂಖಗಳಂತೆ ಶೋಭಿಸುತ್ತವೆ.

ಇಂತಹ ಭಯಂಕರವಾದ ಯುದ್ಧದಲ್ಲಿ ಜಿತಾರಿಯ ಸೈನ್ಯವೆಲ್ಲವೂ ನಾಶವಾದುದನ್ನು ನೋಡಿ, ಅವನ ಮಂತ್ರಿ–ಸುದರ್ಶನನು ತನ್ನ ದೊರೆಯನ್ನು ಕುರಿತು 'ಎಲೈ ಪ್ರಭುವೆ ! ನಮ್ಮ ಸೈನ್ಯವೆಲ್ಲವೂ ನಾಶವಾಯಿತು. ಇನ್ನೇನು ಮಾಡಲಿರುವೆ ?' ಎಂದನು. ಅದಕ್ಕೆ ಜಿತಾರಿ–ರಾಜನು ಹೇಳುತ್ತಾನೆ—'ಮಂತ್ರಿಯೆ ! ಏತಕ್ಕೆ ಹೆದರುವೆ ? ನಾವು ಜಯಿಸಿದರೆ ನಮಗೆ ಇಹಲೋಕದ ಸುಖವಿದೆ. ಯುದ್ಧದಲ್ಲಿ ಸತ್ತರೆ ವೀರಸ್ವರ್ಗವು ದೊರೆತು, ಪರಲೋಕದ ಸುಖವಿದೆ. ಉಭಯತೋಽಪಿ ಸುಖವಿದೆ.

ಜಿತೇನ ಲಭ್ಯತೇ ಲಕ್ಷ್ಮೀಃ ಮೃತೇನಾಪಿ ಸುರಾಂಗನಾ ।
ಕ್ಷಣವಿಧ್ವಂಸಿನಃ ಕಾಯಾಃ ಕಾ ಚಿಂತಾ ಮರಣೇ ರಣೇ ॥

—ಜಯಿಸುವವನಿಗೆ ರಾಜ್ಯಲಕ್ಷ್ಮಿಯು ದೊರೆಯುತ್ತಾಳೆ. ಸತ್ತವನಿಗೆ ದೇವಾಂಗನೆಯು ದೊರೆಯುತ್ತಾಳೆ. ದೇಹಗಳು ಕ್ಷಣಕಾಲದಲ್ಲಿ ನಾಶವಾಗುವವು. ರಣದಲ್ಲಿಯೂ ಮರಣದಲ್ಲಿಯೂ ಚಿಂತೆಯೇನು ?'

ಆ ಮಾತನ್ನು ಕೇಳಿ ಮಂತ್ರಿಯು ಜಿತಾರಿಯ ಮೂರ್ಖತನವನ್ನು ತನ್ನ ಮನಸ್ಸಿನಲ್ಲಿ ಯೋಚಿಸುತ್ತ ಅವನನ್ನು ರಣರಂಗದಿಂದ ಬಹುಶ್ರಮವಹಿಸಿ ಕರೆದುಕೊಂಡು ಹೊರಟುಹೋದನು. ಆಗ ಜಿತಾರಿಯು ಹೇಳುತ್ತಾನೆ– 'ಎಲೈ ಮಂತ್ರಿಯೇ ! ಬಲವತ್ತರವಾದ ದೈವದ ಮುಂದೆ ಪೌರುಷವು ವ್ಯರ್ಥವೆಂಬ ಲೋಕೋಕ್ತಿಯು ಸತ್ಯವಾದುದೆಂದು ಈಗ ನನಗೆ ಗೋಚರಕ್ಕೆ ಬಂದಿತು.

ನೇತಾ ಯತ್ರ ಬೃಹಸ್ಪತಿಃ ಪ್ರಹರಣಂ ವಜ್ರಂ ಸುರಾಃ ಸೈನಿಕಾಃ ।
ಸ್ವರ್ಗೋ ದುರ್ಗಮನುಗ್ರಹಃ ಖಲು ಹರೇರೈರಾವಣೋ ವಾರಣಃ ॥
ಇತ್ಯಾಶ್ಚರ್ಯಬಲಾನ್ವಿತೋಽಪಿ ಬಲಭಿದ್ಭಗ್ನಃ ಪರೈಃ ಸಂಗರೇ ।
ತದ್ವ್ಯಕ್ತಂ ನನು ದೈವಮೇವ ಶರಣಂ ಧಿಗ್ಧಿಗ್ವೃಥಾ ಪೌರುಷಂ ॥

—ಯಾವ ಸ್ವರ್ಗದಲ್ಲಿ ದೇವೇಂದ್ರನು ಸಂಚಾಲಕನಾದ ಬೃಹಸ್ಪತಿ, ವಜ್ರಾಯುಧ, ಸೈನಿಕರಾದ ದೇವತೆಗಳು, ಸ್ವರ್ಗವೇ ದುರ್ಗ, ದೇವರ ಪೂರ್ಣಾನುಗ್ರಹ, ಆನೆಯಾದ ಐರಾವಣ ಇಂತಹ ಆಶ್ಚರ್ಯಕರವಾದ ಬಲವುಳ್ಳವನಾದರೂ ಯುದ್ಧದಲ್ಲಿ ಶತ್ರುಗಳಿಂದ ಪರಾಜಿತನಾದನು. ಆದುದರಿಂದ ದೈವವೇ ರಕ್ಷಕವೆಂಬುದು ಯುಕ್ತವಾಗಿದೆ. ವ್ಯರ್ಥವಾದ ಪುರುಷಪ್ರಯತ್ನಕ್ಕೆ ಧಿಕ್ಕಾರ ಧಿಕ್ಕಾರವಿರಲಿ.

ಛಿತ್ವಾ ಪಾಶಮಪಾಸ್ಯ ಕೂಟರಚನಾಂ ಭಂಕ್ತ್ವಾ ಬಲಾದ್ವಾಗುರಾಂ ।
ಪರ್ಯಸ್ತಾಗ್ನಿಶಿಖಾಕಲಾಪಜಟಿಲಾನ್ನಿರ್ಗತ್ಯ ದೂರಂ ವನಾತ್ ॥
ವ್ಯಾಧಾನಾಂ ಶರಗೋಚರಾದತಿಜವೇನೋತ್ಪ್ಲುತ್ಯ ಧಾವನ್ಮೃಗಃ ।
ಕೂಪಾಂತಃಪತಿತಃ ಕರೋತಿ ವಿಧುರೇ ಕಿಂ ವಾ ವಿಧೌ ಪೌರುಷಂ ॥

—ಜಿಂಕೆಯು ಹಗ್ಗವನ್ನು ಕತ್ತರಿಸಿ, ಉರುಲನ್ನು ತಪ್ಪಿಸಿಕೊಂಡು, ಬಲೆಯನ್ನು ಶಕ್ತಿಯಿಂದ ಹರಿದು, ವ್ಯಾಪಿಸಿರುವ ಬೆಂಕಿಯ ಜ್ವಾಲೆಯ ಸಮೂಹದಿಂದ ದಟ್ಟವಾದ ವನದಿಂದ ದೂರ ಹೊರಟು ಹೋಗಿ, ಬೇಡರ ಬಾಣಗಳ ಗುರಿಯನ್ನು ತಪ್ಪಿಸಿಕೊಂಡು, ವೇಗದಿಂದ ನೆಗೆದು ಓಡಿಹೋಗಿ, ಬಾವಿಯೊಳಕ್ಕೆ ಬಿದ್ದುಹೋಯಿತು. ದೈವವು ಪ್ರತಿಕೂಲವಾಗಿದ್ದರೆ ಪುರುಷಪ್ರಯತ್ನವು ಏನನ್ನು ಮಾಡಬಲ್ಲುದು ?

ಜಿತಾರಿರಾಜನು ಓಡಿಹೋದನೆಂಬ ವಿಷಯವನ್ನು ಕೇಳಿ, ಭಗದತ್ತನು ಅವನನ್ನು ಹಿಂಬಾಲಿಸಿ–ಅಟ್ಟಿಕೊಂಡು ಹೋದನು. ಆಗ ಭಗದತ್ತನ ಮಂತ್ರಿ ಸುಬುದ್ಧಿಯು ಅವನನ್ನು ತಡೆದು, ಭಯದಿಂದ ಓಡಿಹೋಗುವವನನ್ನು ಹಿಂಬಾಲಿಸಬಾರದೆಂದನು.

ಇತ್ತ ಮುಂಡಿಕೆಯು ತನ್ನ ದೆಸೆಯಿಂದ ತಂದೆಗೆ ವಿಪತ್ಪರಂಪರೆಯುಂಟಾದುದೆಂದೂ ತಾನು ನೀಚಕುಲದ ಭಗದತ್ತನಿಗೆ ವಶಳಾಗಿ ಭ್ರಷ್ಟಳಾಗುವುದಕ್ಕಿಂತಲೂ ಆತ್ಮಘಾತವು ನಿಷಿದ್ಧವಾದರೂ ಇಂತಹ ಇಕ್ಕಟ್ಟಿನಲ್ಲಿ ಆತ್ಮಘಾತವನ್ನಾದರೂ ಮಾಡಿಕೊಂಡು ಆತ್ಮಹಿತವನ್ನು ಸಾಧಿಸಿಕೊಳ್ಳುವುದು ತ್ತಮವೆಂದು ಬಗೆದು, ಭಗವನ್ನಾಮಸ್ಮರಣವನ್ನು ಮಾಡಿ, ಪಂಚನಮಸ್ಕಾರ ಮಂತ್ರವನ್ನುಚ್ಚರಿಸಿ, ಹೊಳೆಯ ಮಡುವಿಗೆ ಬಿದ್ದಳು. ಆಗ ಆಕೆಯ ಸಮ್ಯಕ್ತ್ವಪೂರ್ವಕವಾದ ವ್ರತದ ಮಹಿಮೆಯಿಂದ ದೇವತೆಗಳು ಆ ನೀರನ್ನು ಸ್ಥಳವನ್ನಾಗಿ ಮಾಡಿ, ಅದರ ಮೇಲೆ ರತ್ನಮಯವಾದ ಮಂಡಪವನ್ನೂ ಅದರ ಮಧ್ಯದಲ್ಲಿ ಸಿಂಹಾಸನವನ್ನೂ ರಚಿಸಿ, ಅದರ ಮೇಲೆ ಮುಂಡಿಕೆಯನ್ನು ಕುಳ್ಳಿರಿಸಿ, ಪಂಚಾಶ್ಚರ್ಯವನ್ನು ಮಾಡಿದರು.

ಇತ್ತ ಭಗದತ್ತನು ಜಿತಾರಿಯ ಪುರಪ್ರವೇಶವನ್ನು ಮಾಡಿ, ಕೊಳ್ಳೆ ಹೊಡೆದು, ಜಿತಾರಿಯ ಅರಮನೆಗೆ ಪ್ರವೇಶಮಾಡಲು ಹೋದಾಗ, ಅವನನ್ನು ದೇವತೆಗಳು ಸ್ತಂಭಿತನನ್ನಾಗಿ ಮಾಡಿದರು. ಆಗ ಭಗದತ್ತನು ಮುಂಡಿಕೆಯ ವೃತ್ತಾಂತವನ್ನು ಕೇಳಿ, ತಿಳಿದು ಮತ್ತು ಪ್ರತ್ಯಕ್ಷವಾಗಿ ನೋಡಿ ಆಕೆಯ ವ್ರತಮಹಿಮೆಯಿಂದ ತನಗೆ ಈ ರೀತಿಯಾದುದೆಂದು ಮನಗಂಡು, ದುರಭಿಮಾನವನ್ನು ಬಿಟ್ಟು, ವಿನಯದಿಂದ ಆಕೆಗೆ ನಮಸ್ಕಾರವನ್ನು ಮಾಡಿ 'ಎಲೆ ಸಹೋದರಿಯೇ ! ನಾನು ತಿಳಿಯದೆ ಮಾಡಿದ ತಪ್ಪನ್ನೆಲ್ಲಾ ಮನ್ನಿಸು' ಎಂದು ಹೇಳಿ, ಜಿತಾರಿಯನ್ನೂ ಕರೆಯಿಸಿ, ಹಾಗೆಯೇ ಅವನ ಕ್ಷಮೆಯನ್ನೂ ಬೇಡಿ,

ತಾನು ವೈರಾಗ್ಯಪರನಾಗಿ, ಸದ್ಧರ್ಮವು ಪ್ರಾಣಿಗಳಿಗೆ ಪರಮಹಿತಕಾರಿಯಾದುದೆಂದು ಬಗೆದನು.

ಸೇತುಃ ಸಂಸಾರಸಿಂಧೋರ್ನಿಬಿಡತರಮಹಾಕರ್ಮಕಾಂತಾರವಹ್ನಿ-।
ರ್ಮಿಥ್ಯಾಭಾವಪ್ರಮಾಥೀ ಪಿಹಿತಪೃಥುತಮೋ
ದುರ್ಗತಿದ್ವಾರರೋಧೀ ॥
ಯೇಷಾಂ ನಿರ್ವ್ಯಾಜಬಂಧುರ್ಭವತಿ ಪರಿಭವಾಪನ್ನಸತ್ತ್ವಾವಲಂಬೀ।
ಧರ್ಮಸ್ತೇಷಾಂ ಕಿಮೇಭಿರ್ಬಹುಭಿರಪಿ
ವೃಥಾಲಂಬನೈರ್ಬಾಂಧವಾದ್ಯೈಃ॥

—ಭವಸಾಗರಕ್ಕೆ ಸೇತುವೂ ಬಲು ದಟ್ಟವಾದ ಕರ್ಮವೆಂಬ ದೊಡ್ಡ ಕಾಡಿಗೆ ಬೆಂಕಿಯೂ ಮಿಥ್ಯಾಭಾವವನ್ನು ನಾಶಮಾಡುವುದೂ ಅಜ್ಞಾನಾಂಧಕಾರವನ್ನೂ ದುರ್ಗತಿದ್ವಾರವನ್ನೂ ತಡೆಯುವುದೂ ದುಃಖಿತಪ್ರಾಣಿಗಳಿಗೆ ಆಶ್ರಯವೂ ಆದ ಸದ್ಧರ್ಮವು ಯಾರಿಗೆ ನಿರ್ವ್ಯಾಜಬಂಧುವಾಗಿದೆಯೋ ಅಂಥವರಿಗೆ ಸುಮ್ಮನೆ ಹೊಂದಿಕೊಂಡಿರುವ ಈ ಅನೇಕ ಬಾಂಧವರು ಮೊದಲಾದವರಿಂದೇನು ಪ್ರಯೋಜನ?

ಬಳಿಕ ಭಗದತ್ತನೂ ಜಿತಾರಿಯೂ ಅವರ ಮಂತ್ರಿಗಳೂ ತಂತಮ್ಮ ಪುತ್ರರಿಗೆ ರಾಜ್ಯಪದವಿಯನ್ನೂ ಮಂತ್ರಿಪದವಿಯನ್ನೂ ವಹಿಸಿ ಅವರೂ ಬೇರೆ ಹಲವರೂ ಸತ್ಯಸಾಗರಭಟ್ಟಾರಕರೆಂಬ ತಪೋಧನರ ಬಳಿಯಲ್ಲಿ ದೀಕ್ಷೆಯನ್ನು ತೆಗೆದುಕೊಂಡರು. ಕನಕಚಿತ್ರಾ, ಮುಂಡಿಕಾ, ಸುದರ್ಶನಾ, ಲಕ್ಷ್ಮೀಮತಿ ಮೊದಲಾದವರು ಜಿನಮತಿಯೆಂಬ ತಪಸ್ವಿನಿಯ ಬಳಿಯಲ್ಲಿ ತಪಸ್ಸನ್ನು ಪರಿಗ್ರಹಿಸಿದರು. ಕೆಲವರು ಶ್ರಾವಕರಾದರು. ಕೆಲವರು ಭದ್ರಪರಿಣಾಮಿಗಳಾದರು. ಅನೇಕ ಜೀವಿಗಳಿಗೆ ಧರ್ಮಲಾಭವಾಯಿತು. ಪತಿದೇವಾ! ಇದನ್ನೆಲ್ಲಾ ನಾನು ಪ್ರತ್ಯಕ್ಷವಾಗಿ ನೋಡಿರುವುದರಿಂದ ನನಗೆ ದೃಢತರವಾದ ಧರ್ಮಶ್ರದ್ಧೆಯುಂಟಾಗಿದೆ."

ಈ ಪ್ರಕಾರವಾಗಿ ನಾಗಶ್ರೀಯು ಹೇಳಿದುದನ್ನು ಕೇಳಿ ಅರ್ಹದ್ದಾಸಶ್ರೇಷ್ಠಿಯು 'ನೀನು ಹೇಳಿದ ವಿಷಯವು ಸತ್ಯವಾದುದು. ಇದನ್ನು ನಾನು ನಂಬುತ್ತೇನೆ ಮತ್ತು ಪ್ರೀತಿಸುತ್ತೇನೆ' ಎಂದನು. ಆಕೆಯ ಸವತಿಯರೂ

ಹಾಗೆಯೇ ಹೇಳಿದರು. ಕುಂದಲತೆಯೊಬ್ಬಳು ಮೊದಲಿನಂತೆ ಅದು ಸುಳ್ಳೆಂದೂ ತಾನು ಅದನ್ನು ನಂಬುವುದಿಲ್ಲವೆಂದೂ ಇಚ್ಛಿಸುವುದಿಲ್ಲವೆಂದೂ ಹೇಳಿದಳು. ಅದನ್ನು ಕೇಳಿ ರಾಜ, ಮಂತ್ರಿ ಮತ್ತು ಕಳ್ಳನು ಕುಂದಲತೆಯು ಬಹುದುಷ್ಟಳೆಂದು ತಮ್ಮ ಮನಸ್ಸಿನಲ್ಲಿ ಯೋಚಿಸಿದರು. ದೊರೆಯು ಆಕೆಯನ್ನು ಬೆಳಗಾದ ಬಳಿಕ ಕತ್ತೆಯ ಮೇಲೆ ಮೆರವಣಿಗೆಯನ್ನು ಮಾಡಿಸಿ, ಗಡಿಪಾರು ಮಾಡಬೇಕೆಂದನು. ಕಳ್ಳನು ತನ್ನ ಮನಸ್ಸಿನಲ್ಲಿ ಇದು ದುರ್ಜನಸ್ವಭಾವವೆನ್ನುತ್ತಾನೆ.

ನ ವಿನಾ ಪರಿವಾದೇನ ರಮತೇ ದುರ್ಜನೋ ಜನಃ ।
ಕಾಕಃ ಸರ್ವರಸಾನ್ ಭುಕ್ತ್ವಾ ವಿನಾಮೇಧ್ಯಂ ನ ತೃಪ್ಯತಿ ॥

—ದುರ್ಜನನು ಪರನಿಂದೆಯಿಂದಲ್ಲದೆ ಸಂತೋಷಪಡುವುದಿಲ್ಲ. ಕಾಗೆಯು ಎಲ್ಲಾ ರಸಗಳನ್ನು ಭಕ್ಷಿಸಿದರೂ ಅಮೇಧ್ಯವಿಲ್ಲದೆ ತೃಪ್ತಿಪಡುವುದಿಲ್ಲ.

ಇಂತು ಸಪ್ತಮಪರಿಚ್ಛೇದವು ಮುಗಿದುದು.

ಅಷ್ಟಮಪರಿಚ್ಛೇದ

ಅನಂತರದಲ್ಲಿ ಅರ್ಹದ್ದಾಸನು ಪದ್ಮಲತೆಯ ಕಡೆಗೆ ತಿರುಗಿ 'ಎಲೌ ಪದ್ಮಲತೆ! ನಿನಗೆ ಧರ್ಮಶ್ರದ್ಧೆಯುಂಟಾದುದು ಹೇಗೆ?' ಎಂದನು. ಆಕೆಯು ಕೈಗಳನ್ನು ಮುಗಿದು ಹೇಳುತ್ತಾಳೆ-

"ಅಂಗದೇಶದಲ್ಲಿರುವ ಚಂಪಾಪುರದಲ್ಲಿ ದಾಡಿವಾಹನನೆಂಬ ರಾಜನು ರಾಜ್ಯವಾಳುತ್ತಿದ್ದಾನೆ. ಪದ್ಮಾವತಿಯೆಂಬುವಳು ಆತನ ಪಟ್ಟಮಹಿಷಿ. ಬಹಳ ಸಮ್ಯಗ್ದೃಷ್ಟಿಯೂ ಸದ್ಗುಣಿಯೂ ಆದ ವೃಷಭದಾಸನೆಂಬುವನು ರಾಜಶ್ರೇಷ್ಠಿ. ಅವನ ಹೆಂಡತಿಯ ಹೆಸರೂ ಪದ್ಮಾವತಿಯೆಂದು. ಅವರಿಗೆ ಬಹು ರೂಪವತಿಯಾದ ಪದ್ಮಶ್ರೀಯೆಂಬ ಮಗಳಿದ್ದಾಳೆ. ಅದೇ ನಗರದಲ್ಲಿ ಬೌದ್ಧ ಮತಾನುಯಾಯಿಯಾದ ಬುದ್ಧದಾಸನೆಂಬ ಮತ್ತೊಬ್ಬ ರಾಜಶ್ರೇಷ್ಠಿಯು ಪ್ರಸಿದ್ಧ

ದಾನಿಯಾಗಿದ್ದಾನೆ. ಅವನ ಹೆಂಡತಿ ಬುದ್ಧದಾಸಿಯೆಂಬುವಳು. ಅವರಿಗೆ ಬುದ್ಧಸಿಂಹನೆಂಬ ಮಗನಿದ್ದಾನೆ. ಅವನು ಒಂದಾನೊಂದು ದಿವಸ ತನ್ನ ಮಿತ್ರನಾದ ಕಾಮದೇವನೆಂಬುವನೊಡನೆ ವಿನೋದಾರ್ಥವಾಗಿ ಜಿನದೇವಾಲಯಕ್ಕೆ ಹೋದನು. ಅಲ್ಲಿ ಆ ವೃಷಭದಾಸಶ್ರೇಷ್ಠಿಯ ಪುತ್ರಿ–ಪದ್ಮಶ್ರೀಯು ದೇವಪೂಜೆಯನ್ನು ಮಾಡುತ್ತಿದ್ದಳು. ಆಕೆಯು,

ಶ್ಯಾಮಾ ಯೌವನಶಾಲಿನೀ ಮಧುರವಾಕ್ಸೌಭಾಗ್ಯಭಾಗ್ಯೋದಯಾ।
ಕರ್ಣಾಂತಾಯತಲೋಚನಾತಿಚತುರಪ್ರಾಗಲ್ಭ್ಯಗರ್ವಾನ್ವಿತಾ ॥
ರಮ್ಯಾ ಬಾಲಮರಾಳಮಂಥರಗತಿರ್ಮತ್ತೇಭಕುಂಭಸ್ತನೀ ।
ಬಿಂಬೋಷ್ಠೀ ಪರಿಪೂರ್ಣಚಂದ್ರವದನಾ ಭೃಂಗಾಲಿನೀಲಾಲಕಾ ॥

—ಶ್ಯಾಮವರ್ಣಳೂ ಯೌವನವತಿಯೂ ಮಧುರವಚನವುಳ್ಳವಳೂ ಸೌಭಾಗ್ಯದ ಮತ್ತು ಭಾಗ್ಯದ ಆವಿರ್ಭಾವವುಳ್ಳವಳೂ ಕಿವಿಗಳವರೆಗೆ ನೀಳವಾದ ಕಣ್ಣುಗಳುಳ್ಳವಳೂ ಬಹು ನಿಪುಣವಾದ ಪ್ರತಿಭೆಯ ಗರ್ವದಿಂದ ಕೂಡಿರುವವಳೂ ಮನೋಹರಳೂ ಬಾಲಹಂಸದಂತೆ ಮಂದಗಮನೆಯೂ ಮತ್ತಗಜದ ಕುಂಭಸ್ಥಳದಂತೆ ಸ್ತನಗಳುಳ್ಳವಳೂ ತೊಂಡೆಯ ಹಣ್ಣಿನಂತೆ ತುಟಿಗಳುಳ್ಳವಳೂ ಪೂರ್ಣಚಂದ್ರನಂತೆ ಮುಖವುಳ್ಳವಳೂ ದುಂಬಿಗಳ ಸಾಲಿನಂತೆ ಕಪ್ಪಾದ ಕುರುಳುಕೂದಲುಗಳುಳ್ಳವಳೂ ಆಗಿದ್ದಾಳೆ.

ಆಕೆಯ ರೂಪ ಸೌಂದರ್ಯವನ್ನು ನೋಡಿ, ಬುದ್ಧಸಿಂಹನು ಆಕೆಯಲ್ಲಿ ಮೋಹಿತನಾದನು. ಹೇಗೋ ತನ್ನ ಮನೆಗೆ ಹೋಗಿ ಆ ಚಿಂತೆಯಿಂದ ಹಾಸಿಗೆಯ ಮೇಲೆ ಮಲಗಿಬಿಟ್ಟನು. ಆಗ ಅವನ ತಾಯಿಯು ನೋಡಿ 'ಎಲೌ ಮಗನೇ! ಊಟವನ್ನೂ ಮಾಡದೆ ಹೀಗೇಕೆ ಮಲಗಿರುವೆ ? ನಿನಗೆ ಬಹಳ ಚಿಂತೆಯುಂಟಾಗಿರುವಂತೆ ತೋರುವುದು. ಕಾರಣವೇನು ? ಹೇಳು' ಎಂದಳು. ಆಗ ಅವನು ಲಜ್ಜೆಯನ್ನು ಬಿಟ್ಟು ಎಲ್ಲಾ ವೃತ್ತಾಂತವನ್ನೂ ತಾಯಿಗೆ ಹೇಳಿ, ಆ ಪದ್ಮಶ್ರೀಯನ್ನು ತಂದು ತನಗೆ ವಿವಾಹಮಾಡದಿದ್ದರೆ ತಾನು ಬದುಕುವುದಿಲ್ಲವೆಂದನು.

ನ ಕ್ರೋಧಿನೋ ವಾಙ್ಮಶಠಸ್ಯ ಮಿತ್ರಂ ಕ್ರೂರಸ್ಯ ನ ಸ್ತ್ರೀ
ಸುಖಿನೋ ನ ವಿದ್ಯಾ ।
ನ ಕಾಮಿನೋ ಹ್ರೀರಲಸಸ್ಯ ನ ಶ್ರೀಃ ಸರ್ವಂ ತು ನ
ಸ್ಯಾದನವಸ್ಥಿತಸ್ಯ ॥

—ಕ್ರೋಧಿಗೆ ಒಳ್ಳೆಯ ಮಾತಿಲ್ಲ. ದುಷ್ಟನಿಗೆ ಮಿತ್ರನಿಲ್ಲ. ಕ್ರೂರನಿಗೆ ಸ್ತ್ರೀಯು ಸಲ್ಲಳು. ಸುಖಿಗೆ ವಿದ್ಯೆಯು ಬಾರದು. ಕಾಮುಕನಿಗೆ ಲಜ್ಜೆಯಿಲ್ಲ. ಸೋಮಾರಿಗೆ ಸಂಪತ್ತಿಯಿಲ್ಲ. ಅವ್ಯವಸ್ಥಿತ ಚಪಲಚಿತ್ತವುಳ್ಳವನಿಗೆ ಯಾವುದೂ ಇಲ್ಲ.

ಮಗನ ಮಾತನ್ನು ಕೇಳಿ ಬುದ್ಧದಾಸಿಯು ತನ್ನ ಪತಿಯ ಬಳಿಗೆ ಹೋಗಿ ಮಗನ ವೃತ್ತಾಂತವನ್ನೆಲ್ಲಾ ತಿಳುಹಿದಳು. ಅವನು ಮಗನ ಸಮೀಪಕ್ಕೆ ಹೋಗಿ 'ಎಲೌ ಮಗನೇ! ಮದ್ಯಮಾಂಸಾಹಾರಿಗಳಾದ ನಮ್ಮನ್ನು ಆ ವೃಷಭದಾಸನು ಚಂಡಾಲರನ್ನು ನೋಡುವಂತೆ, ನೋಡುವನು. ಅವನು ನಿನಗೆ ತನ್ನ ಮಗಳನ್ನು ಹೇಗೆ ಕೊಡುವನು ? ದೊರೆಯುತಕ್ಕ ವಸ್ತುವಿಷಯದಲ್ಲಿ ಹಟವನ್ನು ಮಾಡಬೇಕಲ್ಲದೆ ಅಸಾಧ್ಯವಾದ ವಿಷಯದಲ್ಲಿ ಹಟವನ್ನು ಮಾಡಬಾರದು.'

ಯಯೋರೇವ ಸಮಂ ಶೀಲಂ ಯಯೋರೇವ ಸಮಂ ಕುಲಂ ।
ಯಯೋರೇವ ಗುಣೈಃ ಸಾಮ್ಯಂ ತಯೋರ್ಮೈತ್ರೀ ಭವೇದ್ಧ್ರುವಂ॥

—ಯಾರಿಗೆ ಸಮಾನವಾದ ಶೀಲವೂ ಸಮಾನವಾದ ಕುಲವೂ ಸಮಾನವಾದ ಗುಣಗಳೂ ಇರುತ್ತವೋ ಅವರ ಮಿತ್ರತ್ವವೇ ಸ್ಥಿರವಾಗಿರುವುದು.

ತಂದೆಯ ಮಾತನ್ನು ಕೇಳಿ ಬುದ್ಧಸಿಂಹನು 'ತಂದೆಯೇ! ಹೆಚ್ಚು ಮಾತಿನಿಂದೇನು ಪ್ರಯೋಜನ ? ಆ ಪದ್ಮಶ್ರೀಯನ್ನು ತಂದು ಮದುವೆ ಮಾಡದಿದ್ದರೆ ನಾನು ಬದುಕುವುದಿಲ್ಲ' ಎಂದನು. ಅದನ್ನು ಕೇಳಿ ಬುದ್ಧದಾಸನು ಹೇಳುತ್ತಾನೆ–'ಆಹಾ! ಮನ್ಮಥನ ಮಹಿಮೆಯು ಭಯಂಕರವಾದುದು. ಮದನಾಗ್ನಿಯಿಂದ ಜ್ವಲಿಸುತ್ತಿರುವವನು ಅಮೃತಸೇಚನೆಯಿಂದಲೂ ತಣಿಯುವುದಿಲ್ಲ.

ತಾವದ್ಧತ್ತೇ ಪ್ರತಿಷ್ಠಾಂ ಪರಿಹರತಿ ಮನಶ್ಚಾಪಲಂ ಚೈಷ ತಾವತ್ ।
ತಾವತ್ಸಿದ್ಧಾಂತಸೂತ್ರಂ ಸ್ಫುರತಿ ಹೃದಿ ಪರಂ ವಿಶ್ವತತ್ತ್ವೈಕದೀಪಂ ॥

ಕ್ಷೀರಾಕೂಪಾರವೇಲಾವಲಯವಿಲಸಿತೈರ್ಮಾನಿನೀನಾಂ ಕಟಾಕ್ಷೈ-।
ರ್ಯಾವನ್ನೋ ಹನ್ಯಮಾನಂ ಕಲಯತಿ ಹೃದಯಂ
ದೀರ್ಘಲೋಲಾಯಿತೈಶ್ಚ ॥

—ಈ ಮಾನವನು ಕ್ಷೀರಸಮುದ್ರದ ವೃತ್ತಾಕಾರವಾದ ದಡದಂತೆ ಶೋಭೆಯುಳ್ಳವೂ ನೀಳವಾಗಿ ಚಲಿಸುತ್ತಿರುವವೂ ಆದ ಮಾನಿನಿಯರ ಕಡೆಗಣ್ಣಿನ ನೋಟಗಳಿಗೆ ತನ್ನ ಹೃದಯವನ್ನು ಎಲ್ಲಿಯವರೆಗೆ ಗುರಿಯನ್ನಾಗಿ ಮಾಡುವುದಿಲ್ಲವೋ ಅಲ್ಲಿಯವರೆಗೆ ಪ್ರತಿಷ್ಠೆ-ಗೌರವವನ್ನು ಹೊಂದುತ್ತಾನೆ. ಅಲ್ಲಿಯವರೆಗೆ ಮನಸ್ಸಿನ ಚಾಂಚಲ್ಯವನ್ನು ಪರಿಹರಿಸುತ್ತಾನೆ. ಸಮಸ್ತ ತತ್ವಗಳಿಗೆ ಮುಖ್ಯದೀಪದಂತಿರುವ ಶಾಸ್ತ್ರ-ಸಿದ್ಧಾಂತ ಸೂತ್ರವು ಅಲ್ಲಿಯವರೆಗೇ ಇವನ ಹೃದಯದಲ್ಲಿ ಪ್ರಕಾಶಿಸುವುದು.'

ಆಗ ಬುದ್ಧಸಿಂಹನ ತಾಯಿಯು ಹೇಳುತ್ತಾಳೆ—'ಇವನು ಬಹು ಮೂರ್ಖ. ಎಲ್ಲವೂ ಸಾಧ್ಯವಾದರೂ ಮೂರ್ಖನ ಮನಸ್ಸು ಸಾಧ್ಯವಲ್ಲ.

ಪ್ರಸಹ್ಯ ಮಣಿಮುದ್ಧರೇನ್ಮಕರವಕ್ತ್ರದಂಷ್ಟ್ರಾಂತರಾತ್ ।
ಸಮುದ್ರಮಪಿ ಸಂತರೇತ್ಪ್ರಚಲದೂರ್ಮಿಮಾಲಾಕುಲಂ ॥
ಭುಜಂಗಮಪಿ ಕೋಪಿತಂ ಶಿರಸಿ ಪುಷ್ಪವದ್ಧಾರಯೇ-।
ನ್ನತು ಪ್ರತಿನಿವಿಷ್ಟಮೂರ್ಖಜನಚಿತ್ತಮಾರಾಧಯೇತ್ ॥

—ಮೊಸಳೆಯ ಬಾಯಿಯ ದವಡೆಹಲ್ಲುಗಳ ಮಧ್ಯದಿಂದ ಬಲಾತ್ಕರಿಸಿ ರತ್ನವನ್ನಾದರೂ ಕೀಳಬಹುದು. ಚಲಿಸುತ್ತಿರುವ ತೆರೆಗಳ ಸಾಲುಗಳಿಂದ ವ್ಯಾಪ್ತವಾದ ಸಮುದ್ರವನ್ನಾದರೂ ದಾಟಬಹುದು. ಕೋಪಗೊಂಡಿರುವ ಹಾವನ್ನಾದರೂ ತಲೆಯಲ್ಲಿ ಹೂವಿನಂತೆ ಧರಿಸಬಹುದು. ಆದರೆ ಪಿಸುಣರಾದ ಮೂರ್ಖರ ಚಿತ್ತವನ್ನು ಒಲಿಸುವುದು ಸಾಧ್ಯವಲ್ಲ.

ಯಃ ಸ್ವಭಾವೋ ಭವೇದ್ಯಸ್ಯ ಸ ತೇನ ಖಲು ದುಸ್ತ್ಯಜಃ ।
ನ ಹಿ ಶಿಕ್ಷಾಶತೇನಾಪಿ ಕಪಿರ್ಮುಂಚತಿ ಚಾಪಲಂ ॥

—ಯಾವನಿಗೆ ಯಾವುದು ಸ್ವಭಾವವೋ ಅವನು ಅದನ್ನು ಬಿಡುವುದು ಕಷ್ಟ. ಕಪಿಗೆ ನೂರಾರು ಶಿಕ್ಷಣಗಳನ್ನು ಕೊಟ್ಟರೂ ಅದು ತನ್ನ ಚಾಪಲ್ಯವನ್ನು ಬಿಡುವುದಿಲ್ಲ.'

ಬುದ್ಧಸಿಂಹನ ತಂದೆತಾಯಿಗಳು ಎಷ್ಟು ವಿವೇಕವನ್ನು ಹೇಳಿದರೂ ಅವನು ಕೇಳದಿರಲು, ಕೊನೆಯಲ್ಲಿ ಬುದ್ಧದಾಸನು ನಿರುಪಾಯನಾಗಿ ಮಗನನ್ನು ಕುರಿತು ಹೇಳುತ್ತಾನೆ—'ಎಲೌ ಮಗನೇ ! ತಾಳು. ಸ್ಥಿರಮನಸ್ಕನಾಗು. ಸಾವಕಾಶವಾಗಿ ನಿನ್ನ ಕಾರ್ಯವನ್ನು ಸಾಧಿಸುವೆನು.

ಕ್ರಮೇಣ ಭೂಮಿಃ ಸಲಿಲೇನ ಭಿದ್ಯತೆ ।
ಕ್ರಮೇಣ ಕಾರ್ಯಂ ವಿನಯೇನ ಸಿಧ್ಯತಿ ॥
ಕ್ರಮೇಣ ಶತ್ರುಃ ಕಪಟೇನ ಹನ್ಯತೇ ।
ಕ್ರಮೇಣ ಮೋಕ್ಷಃ ಸುಕೃತೇನ ಗಮ್ಯತೇ ॥

—ಕಾಲಕ್ರಮದಿಂದ ನೀರು ಭೂಮಿಯನ್ನು ಭೇದಿಸಿಬಿಡುವುದು. ಕಾಲಕ್ರಮದಿಂದ ಕಾರ್ಯವು ವಿನಯದಿಂದ ಸಿದ್ಧಿಸುವುದು. ಕಾಲಕ್ರಮದಿಂದ ಶತ್ರುವನ್ನು ಕಪಟದಿಂದ ಕೊಲ್ಲಬಹುದು. ಒಳ್ಳೆಯ ಕಾರ್ಯದಿಂದ ಅಂದರೆ ತಪೋಧ್ಯಾನಗಳಿಂದ ಕಾಲಕ್ರಮದಿಂದ ಮೋಕ್ಷವನ್ನು ಹೊಂದಬಹುದು.'

ಈ ಪ್ರಕಾರವಾಗಿ ಮಗನಿಗೆ ಸಮಾಧಾನವನ್ನು ಹೇಳಿ, ತಂದೆಯೂ ಮಗನೂ ಬಹುಮಾಯಾಚಾರದಿಂದ ಯಶೋಧನರೆಂಬ ಜೈನಮುನಿಗಳ ಬಳಿಯಲ್ಲಿ ಜೈನ ವ್ರತನಿಯಮಗಳನ್ನು ಕೈಗೊಂಡು ಜೈನರಾದರು. ಅವರು ಜೈನರಾದ ವಿಷಯವನ್ನು ತಿಳಿದು, ವೃಷಭದಾಸಶ್ರೇಷ್ಠಿಯು ಬಹು ಸಂತುಷ್ಟನಾಗಿ 'ಆಹಾ ! ಇವರು ಧನ್ಯರಾದರು. ದುರ್ಮಾರ್ಗವನ್ನು ಪರಿತ್ಯಜಿಸಿ, ಸನ್ಮಾರ್ಗವನ್ನು ಹೊಂದಿದರು' ಎಂದು ಬುದ್ಧದಾಸನಲ್ಲಿ ಸ್ನೇಹವನ್ನು ಬೆಳಸಿ, ಬಹಳವಾಗಿ ಅವನನ್ನು ಪ್ರೀತಿಸುತ್ತಾ ಬಂದನು.

ದದಾತಿ ಪ್ರತಿಗೃಹ್ಣಾತಿ ಗುಹ್ಯಮಾಖ್ಯಾತಿ ಪೃಚ್ಛತಿ ।
ಭುಙ್ಕ್ತೇ ಭೋಜಯತೇ ಚೈವ ಷಡ್ವಿಧಂ ಪ್ರೀತಿಲಕ್ಷಣಂ ॥

—ಕೊಡುವುದು, ತೆಗೆದುಕೊಳ್ಳುವುದು, ಗುಪ್ತವಿಷಯವನ್ನು ಹೇಳುವುದು, ಕೇಳುವುದು, ಮಿತ್ರನಲ್ಲಿ ಭೋಜನ ಮಾಡುವುದು, ಭೋಜನ ಮಾಡಿಸುವುದು ಇವು ಆರು ಪ್ರೀತಿಯ ಲಕ್ಷಣಗಳು.

ಒಂದಾನೊಂದು ದಿವಸ ವೃಷಭದಾಸಶ್ರೇಷ್ಠಿಯು ಬುದ್ಧದಾಸನನ್ನು ಭೋಜನಕ್ಕೋಸ್ಕರ ತನ್ನ ಮನೆಗೆ ಕರೆದುಕೊಂಡು ಬಂದನು. ಅವರೀರ್ವರೂ ಊಟಕ್ಕೆ ಕುಳಿತರು. ಆಹಾರ ಪದಾರ್ಥಗಳನ್ನು ಬಡಿಸಿದುದೂ ಆಯಿತು. ಆದರೆ ಬುದ್ಧದಾಸನು ಊಟಮಾಡಲೊಲ್ಲನು. ವೃಷಭದಾಸನು ಕಾರಣವನ್ನು ಕೇಳಲು ಪದ್ಮಶ್ರೀಯನ್ನು ತನ್ನ ಮಗನಿಗೆ ಕೊಡುವುದಾಗಿ ಮಾತುಕೊಟ್ಟರೆ ಊಟಮಾಡುವೆನೆಂದನು. ಆಗ ವೃಷಭದಾಸನು 'ಹಾಗೆಯೇ ಆಗಲಿ' ಎಂದು ಒಪ್ಪಿದನು. ಭೋಜನವಾಯಿತು. ಆಮೇಲೆ ಒಂದಾನೊಂದು ಶುಭದಿವಸದಲ್ಲಿ ವಿವಾಹವು ನಡೆಯಿತು. ಬುದ್ಧಸಿಂಹನು ಪದ್ಮಶ್ರೀಯನ್ನು ಕರೆದುಕೊಂಡು ತನ್ನ ಮನೆಗೆ ಹೋದನು. ಬಳಿಕ ಆ ಬುದ್ಧದಾಸನೂ ಬುದ್ಧಸಿಂಹನೂ ತಮ್ಮ ಉದ್ದೇಶವು ಕೈಗೂಡಿತೆಂದು ಬಗೆದು ಮತ್ತೆ ಬೌದ್ಧಮತಾನುಯಾಯಿಗಳಾದರು. ಆ ವಿಷಯವನ್ನೆಲ್ಲಾ ಕೇಳಿ ಮತ್ತು ನೋಡಿ, ವೃಷಭದಾಸಶ್ರೇಷ್ಠಿಯು ಬಹು ದುಃಖಿತನಾಗಿ ಹೇಳುತ್ತಾನೆ–'ಅಹಾ! ಗುಪ್ತವಂಚನೆಯನ್ನು ಯಾರೂ ತಿಳಿಯಲಾಗುವುದಿಲ್ಲ.

ಮಾಯಾಮವಿಶ್ವಾಸವಿಲಾಸಮಂದಿರಾಂ ದುರಾಶಯೋ ಯಃ
ಕುರುತೇ ಧನಾಶಯಾ ।
ಸೋನರ್ಥಸಾರ್ಥಂ ನ ಪತಂತಮೀಕ್ಷತೇ ಯಥಾ ಬಿಡಾಲೋ
ಲಗುಡಂ ಪಯಃ ಪಿಬನ್ ॥

—ಕಣ್ಣನ್ನು ಮುಚ್ಚಿಕೊಂಡು ಹಾಲನ್ನು ಕುಡಿಯುವ ಬೆಕ್ಕು ತನ್ನ ತಲೆಯ ಮೇಲೆ ಬೀಳುವ ದೊಣ್ಣೆಯನ್ನು ಹೇಗೆ ನೋಡುವುದಿಲ್ಲವೋ ಹಾಗೆ ದ್ರವ್ಯದ ಆಶೆಯಿಂದ ದುರಭಿಪ್ರಾಯವುಳ್ಳ ಯಾವ ಮನುಷ್ಯನು ಅವಿಶ್ವಾಸದ ವಿಲಾಸಕ್ಕೆ ಸ್ಥಾನವಾಗಿರುವ ವಂಚನೆಯನ್ನು ಮಾಡುತ್ತಾನೋ ಅವನು ತನಗೆ ಬಂದೊದಗುವ ಅನರ್ಥಪರಂಪರೆಯನ್ನು ನೋಡುವುದಿಲ್ಲ.

ಪ್ರಾಣಾಂತೇಪಿ ನ ಭಙ್ಕ್ತವ್ಯಂ ಗುರುಸಾಕ್ಷೀಕೃತಂ ವ್ರತಂ ।
ವ್ರತಭಂಗೋ ಹಿ ದುಃಖಾಯ ಪ್ರಾಣಾ ಜನ್ಮನಿ ಜನ್ಮನಿ ॥

—ಗುರುಸಾಕ್ಷಿಯಾಗಿ ತೆಗೆದುಕೊಂಡ ವ್ರತವನ್ನು ಪ್ರಾಣಗಳು ಹೋದರೂ ಭಂಗಮಾಡಬಾರದು. ವ್ರತಭಂಗವು ದುಃಖಕ್ಕೆ ಕಾರಣವಾಗುವುದು. ಪ್ರಾಣಗಳಾದರೋ ಪ್ರತಿಯೊಂದು ಜನ್ಮದಲ್ಲಿ ದೊರೆಯುವುವು.'

ಈ ಪ್ರಕಾರವಾಗಿ ಹೇಳಿ ವೃಷಭದಾಸನು ಸುಮ್ಮನಿದ್ದನು. ಪದ್ಮಶ್ರೀಯು ತನ್ನ ಪೂರ್ವಾರ್ಜಿತಕರ್ಮವಶದಿಂದ ಹೀಗಾಯಿತೆಂದು ಬಗೆದು ವಿರಕ್ತಚಿತ್ತಳಾದಳು. ಆಕೆಯು ಬೌದ್ಧಧರ್ಮವನ್ನು ಸ್ವೀಕರಿಸಲಿಲ್ಲ. ಒಂದಾನೊಂದು ದಿವಸ ಬುದ್ಧದಾಸನ ಗುರುವಾದ ಪದ್ಮಸಂಘನೆಂಬುವನು ಅವನ ಮನೆಗೆ ಬಂದು ಪದ್ಮಶ್ರೀಯನ್ನು ಕುರಿತು 'ಎಲೌ ಮಗಳೇ! ಜಗತ್ತಿನಲ್ಲಿರುವ ಧರ್ಮಗಳೆಲ್ಲೆಲ್ಲಾ ಬೌದ್ಧಧರ್ಮವೇ ಶ್ರೇಷ್ಠವಾದುದು. ನೀನು ದುರಾಗ್ರಹವನ್ನು ಬಿಟ್ಟು, ಈ ಧರ್ಮವನ್ನು ನಂಬು. ಇದರಿಂದ ಆತ್ಮಕಲ್ಯಾಣವಾಗುವುದು' ಎಂದನು. ಆ ಮಾತನ್ನು ಕೇಳಿ ಪದ್ಮಶ್ರೀಯು ಹೇಳುತ್ತಾಳೆ–'ಅಯ್ಯಾ ಪದ್ಮಸಂಘನೇ! ಸನ್ಮಾರ್ಗವನ್ನು ಬಿಟ್ಟು ದುರ್ಮಾರ್ಗದಲ್ಲಿ ನನ್ನ ಮನಸ್ಸು ಹೇಗೆತಾನೇ ಪ್ರವರ್ತಿಸುವುದು?

ವನೇಪಿ ಸಿಂಹಾ ಮೃಗಮಾಂಸಭೋಜಿನೋ ಬುಭುಕ್ಷಿತಾ ನೈವ
ತೃಣಂ ಚರಂತಿ ।
ಏವಂ ಕುಲೀನಾ ವ್ಯಸನಾಭಿಭೂತಾ ನ ನೀಚಕರ್ಮಾಣಿ
ಸಮಾಚರಂತಿ ॥

—ವನದಲ್ಲಿ ಮೃಗಮಾಂಸಭಕ್ಷಕಗಳಾದ ಸಿಂಹಗಳು ಹಸಿವಿನಿಂದ ಪೀಡಿತಗಳಾಗಿ ಹುಲ್ಲನ್ನು ತಿನ್ನುವುದೇ ಇಲ್ಲ. ಹೀಗೆ ಸದ್ವಂಶೀಯರು ಶೋಕಪೀಡಿತರಾದರೂ ನೀಚಕಾರ್ಯಗಳನ್ನು ಮಾಡುವುದಿಲ್ಲ.

ದೇವರ ಮತ್ತು ಗುರುಗಳ ಬಳಿಯಲ್ಲಿ ತೆಗೆದುಕೊಂಡ ವ್ರತಗಳನ್ನು ಬಿಡುವವನು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ದುಃಖಿಯಾಗುತ್ತಾನೆ.

ನಿಸ್ಸ್ವಾಭಾಗ್ಯೋ ಭವೇನ್ನಿತ್ಯಂ ಧನಧಾನ್ಯಾದಿವರ್ಜಿತಃ ।
ಭೀತಮೂರ್ತಿಃ ಸದಾ ದುಃಖೀ ವ್ರತಹೀನಶ್ಚ ಮಾನವಃ ॥

—ವ್ರತಹೀನನಾದ ಮನುಷ್ಯನು ಯಾವಾಗಲೂ ಸಂಪತ್ತಿಯಿಲ್ಲದವನೂ ಧನಧಾನ್ಯಾದಿಗಳಿಲ್ಲದವನೂ ಭಯವುಳ್ಳವನೂ ದುಃಖಿಯೂ ಆಗುವನು.

ಸರ್ವಥಾ ಸ್ವಹಿತಮಾಚರಣೀಯಂ ಕಿಂ ಕರಿಷ್ಯತಿ ಜನೋ
ಬಹುಜಲ್ಪಃ ।
ವಿದ್ಯತೇ ನ ಹಿ ಕಶ್ಚಿದುಪಾಯಃ ಸರ್ವಲೋಕಪರಿತೋಷಕರೋ
ಯಃ ॥

—ಸರ್ವಪ್ರಕಾರದಿಂದಲೂ ತನ್ನ ಹಿತವನ್ನು ಆಚರಿಸಬೇಕು. ಹೆಚ್ಚು ಮಾತನಾಡುವ (ಆಕ್ಷೇಪಿಸುವ) ಮನುಷ್ಯನು ಏನು ಮಾಡುವನು? ಎಲ್ಲರಿಗೂ ಸಂತೋಷವನ್ನುಂಟುಮಾಡುವ ಉಪಾಯವಾವುದೂ ಇಲ್ಲ.'

ಪದ್ಮಶ್ರೀಯು ಈ ಮಾತನ್ನು ಕೇಳಿ ಪದ್ಮಸಂಘನು ತನ್ನ ಉಪದೇಶವೇನೂ ನಡೆಯುವಂತಿಲ್ಲವೆಂದು ತಿಳಿದು ಹೊರಟುಹೋದನು. ಒಂದಾನೊಂದು ಕಾಲದಲ್ಲಿ ಪದ್ಮಶ್ರೀಯ ತಂದೆ–ವೃಷಭದಾಸನು ದಿವಂಗತನಾದನು. ಪದ್ಮಶ್ರೀಯು ತಂದೆಯ ಮರಣದಿಂದ ಬಹುದುಃಖಿತಳಾದಳು. ಒಂದು ದಿವಸ ಬುದ್ಧದಾಸನು ಸೊಸೆಯನ್ನು ಕುರಿತು 'ಅಮ್ಮಾ ಪದ್ಮಶ್ರೀಯೇ! ನಿನ್ನ ತಂದೆಯು ಸತ್ತು ವನದ ಮಧ್ಯದಲ್ಲಿ ಜಿಂಕೆಯಾಗಿ ಹುಟ್ಟಿದ್ದಾನೆಂದು ನನ್ನ ಗುರುಗಳು ದಿವ್ಯಜ್ಞಾನದಿಂದ ತಿಳಿದು ಹೇಳಿದರು' ಎಂದನು. ಆ ಮಾತನ್ನು ಕೇಳಿ ಪದ್ಮಶ್ರೀಗೆ ಬಹಳ ಕೋಪವು ಬಂದಿತು. ಅದನ್ನು ಹೊರಗೆ ತೋರಿಸದೆ ಬುದ್ಧದಾಸನನ್ನು ಕುರಿತು 'ಮಾವಾಜೀಯವರೇ! ತಮ್ಮ ಗುರುಗಳು ಅಂತಹ ದಿವ್ಯಜ್ಞಾನಿಗಳಾದರೆ, ನಾನೂ ಬುದ್ಧಮತವನ್ನವಲಂಬಿಸುವೆನು' ಎಂದು ಹೇಳಿ ಆ ಬೌದ್ಧಯತಿಗಳಿಗೆ ಊಟಕ್ಕೆ ಹೇಳಿಕಳುಹಿಸಿದಳು. ಆಗ ಅವರೆಲ್ಲರೂ ಬಹುಸಂತೋಷದಿಂದ ಪದ್ಮಶ್ರೀಯ ಮನೆಗೆ ಊಟಕ್ಕೆ ಬಂದರು. ಪದ್ಮಶ್ರೀಯು ಅವರೆಲ್ಲರಿಗೂ ಬಹಳ ಆದರದಿಂದ ಸ್ವಾಗತವನ್ನು ಮಾಡಿ, ಮನೆಯೊಳಕ್ಕೆ ಕರೆದೊಯ್ದು ಸತ್ಕರಿಸಿದಳು. ಬಳಿಕ ಆ ಬೌದ್ಧಸನ್ಯಾಸಿಗಳನ್ನು ಊಟಕ್ಕೆ ಕುಳ್ಳಿರಿಸಿ ಅವರು ಹೊರಗೆ–ಚಾವಡಿಯಲ್ಲಿರಿಸಿದ್ದ ಅವರ ಪದಾರ್ಥಗಳಲ್ಲಿ ಒಂದೊಂದನ್ನು ತನ್ನ ಕಡೆಯವರಿಂದ ಅಡಗಿಸಿಡಿಸಿದಳು. ಆ ಸನ್ಯಾಸಿಗಳಿಗೆ ಭೋಜನವಾದ ಮೇಲೆ ಗಂಧತಾಂಬೂಲಾದಿಗಳಿಂದ ಅವರನ್ನು ಸತ್ಕರಿಸಿದಳು. ಬಳಿಕ ಅವರು ತಮ್ಮ ಧರ್ಮವನ್ನು ಸ್ವೀಕರಿಸುವಂತೆ ಪದ್ಮಶ್ರೀಗೆ ಹೇಳಿದರು. ಆಕೆಯು 'ನಾಳೆ ಪ್ರಾತಃಕಾಲ ನಿಮ್ಮ ಧರ್ಮವನ್ನು ಸ್ವೀಕರಿಸುವೆನು' ಎಂದಳು. ಅದಕ್ಕೆ ಒಪ್ಪಿ ಅವರು ಹೊರಡುವಾಗ ತಮ್ಮ ಒಂದೊಂದು ಪದಾರ್ಥಗಳಿಲ್ಲದಿದ್ದುದನ್ನು ನೋಡಿ, ಪದ್ಮಶ್ರೀಯನ್ನು ಕುರಿತು 'ನಮ್ಮ ಪದಾರ್ಥಗಳಿಲ್ಲ. ಯಾರು ತೆಗೆದರು?' ಎಂದು ಪ್ರಶ್ನೆಮಾಡಿದರು. ಪದ್ಮಶ್ರೀಯು 'ತಾವುಗಳು ದಿವ್ಯಜ್ಞಾನಿಗಳು. ಜನ್ಮಾಂತರಗಳನ್ನೂ ತಿಳಿಯಬಲ್ಲಿರಿ. ಅಂದಮೇಲೆ ತಮ್ಮ ಆ ಪದಾರ್ಥಗಳು ಎಲ್ಲಿರುತ್ತವೆ? ಅವುಗಳನ್ನು ಅಪಹರಿಸಿದವರಾರು? ಎಲ್ಲಿ

ದ್ದಾರೆ? ಎಂಬುದನ್ನು ತಿಳಿಯಲಾರಿರಾ?' ಎಂದಳು. ಅದಕ್ಕೆ ಸನ್ಯಾಸಿಗಳು 'ಅಂತಹ ಜ್ಞಾನವು ನಮ್ಮಲ್ಲಿಲ್ಲ' ಎಂದರು. ಪದ್ಮಶ್ರೀಯು 'ನನ್ನ ತಂದೆಗೆ ದುರ್ಗತಿಯಾಯಿತೆಂದು ತಿಳಿದವರು ನಿಮ್ಮ ಪದಾರ್ಥಗಳೇನಾದುವೆಂದು ತಿಳಿಯಲಾರದೆ ಹೋದಿರಾ?' ಎಂದು ಪರಿಹಾಸ್ಯಮಾಡಿ ಆ ಪದಾರ್ಥಗಳನ್ನು ತರಿಸಿಕೊಟ್ಟಳು. ಆಗ ಆ ಭಿಕ್ಷುಗಳು ಲಜ್ಜಿತರಾಗಿ ಹೊರಟು, ಬುದ್ಧದಾಸನ ಬಳಿಗೆ ಹೋಗಿ 'ಎಲೌ ಪಾಪಿಷ್ಠನೆ! ನಿನ್ನ ಸೊಸೆಗೆ ಹೇಳಿಕೊಟ್ಟು ನಮಗೆ ಅಪಮಾನವನ್ನು ಮಾಡಿಸಿದೆ' ಎಂದು ಆಕ್ರೋಶದಿಂದ ನುಡಿದರು. ಬುದ್ಧದಾಸನು ವಿನಯೋಕ್ತಿಗಳಿಂದ ಅವರನ್ನು ಸಮಾಧಾನಪಡಿಸಿ ಕಳುಹಿಸಿಕೊಟ್ಟನು. ಬಳಿಕ ತನ್ನ ಮಗ–ಬುದ್ಧಸಿಂಹನನ್ನೂ ಸೊಸೆ-ಪದ್ಮಶ್ರೀಯನ್ನೂ ಕರೆದು 'ನೀವಿಬ್ಬರೂ ನನ್ನ ಮನೆಯನ್ನು ಬಿಟ್ಟು ಹೊರಟುಹೋಗಬೇಕು' ಎಂದು ಹೇಳಿ ಅವರ ಸರ್ವಸ್ವವನ್ನೂ ಅಪಹರಿಸಿ ಮನೆಯಿಂದ ಹೊರಡಿಸಿಬಿಟ್ಟನು. ಆಗ ಪದ್ಮಶ್ರೀಯು ತನ್ನ ಗಂಡನನ್ನು ಕುರಿತು 'ಪತಿದೇವಾ! ಚಿಂತಿಸಬೇಡ. ಈಗ ನಾವಿಬ್ಬರೂ ನನ್ನ ತಾಯಿಯ ಮನೆಗೆ ಹೋಗೋಣ' ಎಂದಳು. ಆ ಮಾತನ್ನು ಕೇಳಿ ಬುದ್ಧಸಿಂಹನು ಹೇಳುತ್ತಾನೆ–'ಭಿಕ್ಷಾಟನವನ್ನಾದರೂ ಮಾಡಿ ಜೀವಿಸುವೆನಲ್ಲದೆ, ಕಷ್ಟಕಾಲದಲ್ಲಿ ಬಂಧುಗಳ ಮಧ್ಯದಲ್ಲಿ ಜೀವಿಸಲಾರೆನು.

ವರಂ ವನಂ ವ್ಯಾಘ್ರಮೃಗೇಂದ್ರಸೇವಿತಂ ದ್ರುಮಾಲಯೇ
ಪತ್ರಫಲಾದಿಭೋಜನಂ।
ತೃಣೇಷು ಶಯ್ಯಾ ವರಜೀರ್ಣವಲ್ಕಲಂ ನ ಬಂಧುಮಧ್ಯೇ
ಧನಹೀನಜೀವಿತಂ॥

—ಬಂಧುಗಳ ಮಧ್ಯದಲ್ಲಿ ಹಣವಿಲ್ಲದ ಜೀವನಕ್ಕಿಂತಲೂ ಹುಲಿ, ಸಿಂಹಗಳು ವಾಸಮಾಡುವ ವನವು ಒಳ್ಳೆಯದು. ಮರಗಳ ಕೆಳಗೆ ಎಲೆ ಹಣ್ಣುಗಳನ್ನು ತಿಂದುಕೊಂಡಿರುವುದು ಒಳ್ಳೆಯದು. ಹುಲ್ಲುಗಳಲ್ಲಿ ಮಲಗುವುದು ಒಳ್ಳೆಯದು. ಚಿಂದಿ, ನಾರುಬಟ್ಟೆಯನ್ನು ಹೊದ್ದಿರುವುದು ಒಳ್ಳೆಯದು.'

ಅನಂತರದಲ್ಲಿ ಆ ದಂಪತಿಗಳು ದೇಶಾಂತರಕ್ಕೆ ಹೊರಟುಹೋಗಿ, ಒಂದು ಗ್ರಾಮದ ಹೊರಗೆ ತಂಗಿದರು. ಅಲ್ಲಿಗೆ ಇಬ್ಬರು ವರ್ತಕರು ಬಂದರು. ಅವರು ಪದ್ಮಶ್ರೀಯ ಅನುಪಮರೂಪವನ್ನು ನೋಡಿ ಮೋಹಿತರಾಗಿ, ಆಕೆಯನ್ನು

ಅಪಹರಿಸಬೇಕೆಂಬ ದುರುದ್ದೇಶದಿಂದ ಒಬ್ಬನು ಇನ್ನೊಬ್ಬನಿಗೆ ತಿಳಿಯದಂತೆ ಪರಸ್ಪರವಾಗಿ ಆಹಾರದಲ್ಲಿ ವಿಷವನ್ನು ಬೆರೆಸಿಕೊಟ್ಟು ಅದನ್ನು ಭುಂಜಿಸಿ, ಇಬ್ಬರೂ ಮೂರ್ಛಿತರಾದರು. ಪದ್ಮಶ್ರೀಯು ತಡೆದರೂ ಕೇಳದೆ ರಾತ್ರಿಯಲ್ಲಿ ಬುದ್ಧಸಿಂಹನೂ ಅವರ ಜತೆಯಲ್ಲಿ ಆ ಆಹಾರವನ್ನು ಭುಂಜಿಸಿ, ಅವನೂ ಮೂರ್ಛಿತನಾದನು. ಪದ್ಮಶ್ರೀಯು ರಾತ್ರಿಯನ್ನೆಲ್ಲಾ ಶೋಕದಲ್ಲಿ ಕಳೆದಳು. ಬೆಳಗಾದ ಮೇಲೆ ಒಬ್ಬ ಮನುಷ್ಯನು ಅಲ್ಲಿಗೆ ಬಂದು, ಆ ಮೂರ್ಛಾವಸ್ಥೆಯನ್ನು ನೋಡಿ, ಬುದ್ಧದಾಸನಲ್ಲಿಗೆ ಹೋಗಿ ಅವನಿಗೆ ಆ ಸಮಾಚಾರವನ್ನು ತಿಳುಹಿದನು. ಅವನು ಬಹು ದುಃಖಿತನಾಗಿ ಬಂದು, ಪದ್ಮಶ್ರೀಯನ್ನು ಕುರಿತು 'ಎಲೌ ಶಾಕಿನಿಯೇ ! ನೀನು ನನ್ನ ಮಗನನ್ನೂ ಈ ಇಬ್ಬರು ವರ್ತಕರನ್ನೂ ಭಕ್ಷಿಸಿದೆ. ಹೆಚ್ಚು ಮಾತೇಕೆ ? ಒಳ್ಳೆಯ ಮಾತಿನಲ್ಲಿ ನನ್ನ ಮಗನನ್ನು ಏಳಿಸು. ಹಾಗಿಲ್ಲದಿದ್ದರೆ ನಿನ್ನನ್ನು ಪೂರೈಸಿಬಿಡುವೆನು' ಎಂದು ಹೇಳಿ, ಆಕೆಯ ಕಾಲಿನ ಕೆಳಗೆ ಮಗನನ್ನು ಹಾಕಿ ಅಳುವುದಕ್ಕೆ ತೊಡಗಿದನು. ಆಗ ಪದ್ಮಶ್ರೀಯು ದುಃಖದಿಂದ ದಿಕ್ಕು ತೋರದವಳಾಗಿ 'ನನ್ನ ಕರ್ಮೋದಯದಿಂದ ನನಗೆ ಬಂದೊದಗಿದ ಕಷ್ಟವನ್ನು ಪರಿಹರಿಸುವವರಾರು ? ಹಾ ! ವಿಧಿಯೇ !' ಎಂದು ಅಳುತ್ತಾ ಕೈಗಳನ್ನು ಮುಗಿದು 'ಎಲೈ ಶಾಸನದೇವತೆಗಳೇ ! ನಾನು ನಂಬಿರುವ ಸದ್ಧರ್ಮದಲ್ಲಿಯೂ ನನ್ನ ಪಾತಿವ್ರತ್ಯ ಧರ್ಮದಲ್ಲಿಯೂ ಮಹಿಮೆಯಿರುವುದಾದರೆ, ನನ್ನ ಪತಿದೇವನೂ ಈ ವರ್ತಕರೂ ಬದುಕಲಿ' ಎಂದು ಅನನ್ಯಮಾನಸಳಾಗಿ ಪ್ರಾರ್ಥಿಸಿದಳು. ಬಳಿಕ ಆಕೆಯ ದೃಢವ್ರತಮಹಿಮೆಯಿಂದ ಅವರೆಲ್ಲರೂ ಎದ್ದು ಕುಳಿತರು. ಈ ಸಮಾಚಾರವನ್ನೆಲ್ಲಾ ಕೇಳಿ ಪುರನಿವಾಸಿಗಳೆಲ್ಲಾ 'ಈಕೆಯು ಇಂತಹ ರೂಪ ಯೌವನವತಿಯಾದರೂ ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಂಡಿರುತ್ತಾಳೆ. ಈಕೆಯು ಧನ್ಯಳು' ಎಂದು ಪದ್ಮಶ್ರೀಯನ್ನು ಬಹಳವಾಗಿ ಕೊಂಡಾಡಿದರು.

ಕಿಂ ಚಿತ್ರಂ ಯದಿ ರಾಜನೀತಿನಿಪುಣೋ ರಾಜಾ ಭವೇದ್ಧಾರ್ಮಿಕಃ ।
ಕಿಂ ಚಿತ್ರಂ ಯದಿ ವೇದಶಾಸ್ತ್ರನಿಪುಣೋ ವಿಪ್ರೋ ಭವೇತ್ಪಂಡಿತಃ ॥
ತಚ್ಚಿತ್ರಂ ಯದಿ ರೂಪಯೌವನವತೀ ಸಾಧ್ವೀ ಭವೇತ್ಕಾಮಿನೀ ।
ತಚ್ಚಿತ್ರಂ ಯದಿ ನಿರ್ಧನೋಽಪಿ ಪುರುಷಃ ಪಾಪಂ ನ ಕುರ್ಯಾತ್ಕ್ವಚಿತ್ ॥

—ರಾಜನೀತಿನಿಪುಣನಾದ ದೊರೆಯು ಧಾರ್ಮಿಕನಾದರೆ ಅದೇನಾಶ್ಚರ್ಯ? ವೇದಶಾಸ್ತ್ರನಿಪುಣನಾದ ಬ್ರಾಹ್ಮಣನು ಪಂಡಿತನಾದರೆ ಅದೇನಾಶ್ಚರ್ಯ ? ಆದರೆ ರೂಪಯೌವನವತಿಯಾದ ಕಾಮಿನಿಯು ಪತಿವ್ರತೆಯಾಗಿದ್ದರೆ ಅದು ಆಶ್ಚರ್ಯ ಮತ್ತು ದರಿದ್ರನಾದ ಪುರುಷನು ಎಂದೂ ಪಾಪಕಾರ್ಯವನ್ನು ಮಾಡದಿದ್ದರೆ ಅದು ಆಶ್ಚರ್ಯ.

ಬಳಿಕ ಆ ಸಾಧ್ವೀಶಿರೋಮಣಿಯಾದ ಪದ್ಮಶ್ರೀಯನ್ನು ಪುರನಿವಾಸಿಗಳೂ ದೇವತೆಗಳೂ ಪೂಜಿಸಿ, ದೇವತೆಗಳು ಪಂಚಾಶ್ಚರ್ಯಗಳನ್ನೂ ಮಾಡಿದರು. ಇದನ್ನೆಲ್ಲಾ ಪ್ರತ್ಯಕ್ಷವಾಗಿ ನೋಡಿ ಮತ್ತು ಕೇಳಿ ವೈರಾಗ್ಯಪರನಾದ ದೊರೆಯು 'ಆಹಾ ! ಪವಿತ್ರವಾದ ಜೈನಧರ್ಮದಿಂದ ಸಮಸ್ತವಾದ ಇಷ್ಟಾರ್ಥವೂ ಪ್ರಾಪ್ತವಾಗುವುದರಿಂದ ಇದನ್ನು ಪರಿಗ್ರಹಿಸಬೇಕು.

ರಮ್ಯಂ ರೂಪಮರೋಗತಾ ಗುಣಗಣಃ ಕಾಂತಾಃ ಕುರಂಗೀದೃಶಃ ।
ಸೌಭಾಗ್ಯಂ ಜನಮಾನ್ಯತಾ ಸುಮತಯಃ ಸಂಪತ್ತಯಃ ಕೀರ್ತಯಃ ॥
ವೈದುಷ್ಯಂ ರತಿರುತ್ತಮೇನ ಗುರುಣಾ ಯೋಗಃ ಸಹಾಯಾಃ ಸುಖಂ ।
ಧರ್ಮಾದೇವ ಭವಂತಿ ಯತ್ತದನಿಶಂ ಧರ್ಮೇ ಮನೋ ರಜ್ಯತಾಂ ॥

—ರಮಣೀಯವಾದ ರೂಪವೂ ರೋಗವಿಲ್ಲದಿರುವಿಕೆಯೂ ಗುಣರಾಶಿಯೂ ಮೃಗನೇತ್ರೆಯರಾದ ಪತ್ನಿಯರೂ ಸೌಭಾಗ್ಯವೂ ಜನರಿಂದ ಮನ್ನಣೆಯೂ ಒಳ್ಳೆಯ ಬುದ್ಧಿಯೂ ಸಂಪತ್ತಿಯೂ ಕೀರ್ತಿಯೂ ಪಾಂಡಿತ್ಯವೂ ಅನುರಾಗವೂ ಉತ್ತಮ ಗುರುವಿನ ಸಂಬಂಧವೂ ಸಹಾಯಕರೂ ಸುಖವೂ ಧರ್ಮದಿಂದಲೇ ಪ್ರಾಪ್ತವಾಗುವುದರಿಂದ ಧರ್ಮದಲ್ಲಿ ಯಾವಾಗಲೂ ಮನವು ಅನುರಾಗವುಳ್ಳುದಾಗಿರಲಿ.'

ಎಂದು ಯೋಚಿಸಿ ತನ್ನ ಪುತ್ರನಾದ ನಯವಿಕ್ರಮನಿಗೆ ರಾಜ್ಯಭಾರವನ್ನು ವಹಿಸಿ, ತಾನು ಯಶೋಧರರೆಂಬ ಮುನಿವರ್ಯರ ಬಳಿಯಲ್ಲಿ ದೀಕ್ಷೆಯನ್ನು ತೆಗೆದುಕೊಂಡನು. ಇನ್ನೂ ಹಲವರು ಸನ್ಯಾಸಧರ್ಮವನ್ನು ಸ್ವೀಕರಿಸಿದರು. ಬುದ್ಧದಾಸ, ಬುದ್ಧಸಿಂಹ ಮೊದಲಾದವರು ಅಹಿಂಸಾಣುವ್ರತಾದಿ ಶ್ರಾವಕವ್ರತಧಾರಿಗಳಾದರು. ಕೆಲವರು ಭದ್ರಪರಿಣಾಮಿಗಳಾದರು. ರಾಣಿಯಾದ ಬುದ್ಧದಾಸಿಯೂ ವೃಷಭದಾಸನ ಪತ್ನಿಯಾದ ಪದ್ಮಾವತಿಯೂ ಪದ್ಮಶ್ರೀ

ಮೊದಲಾದವರೂ ಸರಸ್ವತ್ಯಾರ್ಯಿಕೆಯ ಬಳಿಯಲ್ಲಿ ತಪಸ್ವಿನಿಯರಾದರು. ಎಲೈ ಸ್ವಾಮಿಯೆ! ಇದನ್ನೆಲ್ಲಾ ನಾನು ಪ್ರತ್ಯಕ್ಷವಾಗಿ ನೋಡಿರುವುದರಿಂದ, ನನಗೆ ದೃಢತರವಾದ ಸಮ್ಯಕ್ತ್ವವುಂಟಾಗಿದೆ."

ಅರ್ಹದ್ದಾಸಶ್ರೇಷ್ಠಿಯು ಪದ್ಮಲತೆಯ ಈ ಮಾತುಗಳನ್ನು ಕೇಳಿ, ಬಹು ಸಂತುಷ್ಟನಾಗಿ 'ಎಲೌ ಪದ್ಮಲತೆಯೇ! ನೀನು ಹೇಳಿದುದನ್ನು ನಾನು ನಂಬುತ್ತೇನೆ, ಪ್ರೀತಿಸುತ್ತೇನೆ ಮತ್ತು ಇಚ್ಛೈಸುತ್ತೇನೆ' ಎಂದನು. ಆವನ ಇತರ ಪತ್ನಿಯರೂ ಹಾಗೆಯೇ ಹೇಳಿದರು. ಕುಂದಲತೆಯೊಬ್ಬಳು ಮಾತ್ರ ಮೊದಲಿನಂತೆ 'ಇದೆಲ್ಲ ಸುಳ್ಳು' ಎಂದಳು. ಆಕೆಯ ಮಾತನ್ನು ಕೇಳಿ ದೊರೆಯೂ ಮಂತ್ರಿಯೂ ಕಳ್ಳನೂ ತಂತಮ್ಮ ಮನಸ್ಸಿನಲ್ಲಿ 'ಆಹಾ! ಪದ್ಮಲತೆಯು ಪ್ರತ್ಯಕ್ಷವಾಗಿ ಕಂಡಿರುವುದನ್ನು ಈ ಪಾಪಿಷ್ಠೆಯಾದ ಕುಂದ ಲತೆಯು ಸುಳ್ಳೆಂದು ಹೇಳುತ್ತಿರುವಳಲ್ಲ! ಪ್ರಾತಃಕಾಲದಲ್ಲಿ ಕತ್ತೆಯ ಮೇಲೆ ಕುಳ್ಳಿರಿಸಿ, ಈಕೆಯನ್ನು 'ಗಡಿಪಾರು ಮಾಡಬೇಕು' ಎಂದು ಯೋಚಿಸಿದರು. ಮತ್ತೆ ಕಳ್ಳನು 'ಇದು ದುಷ್ಟಸ್ವಭಾವ' ಎಂದು ತನ್ನ ಮನಸ್ಸಿನಲ್ಲಿ ಹೇಳಿಕೊಂಡನು.

ಇಂತು ಅಷ್ಟಮಪರಿಚ್ಛೇದವು ಮುಗಿದುದು.

ನವಮಪರಿಚ್ಛೇದ

ಅನಂತರದಲ್ಲಿ ಅರ್ಹದ್ದಾಸಶ್ರೇಷ್ಠಿಯು ಕನಕಲತೆಯೆಂಬ ಪತ್ನಿಯ ಕಡೆಗೆ ತಿರುಗಿ 'ಎಲೌ ಕನಕಲತೆಯೇ? ನಿನಗೆ ಧರ್ಮದಲ್ಲಿ ಶ್ರದ್ಧೆಯುಂಟಾಗಲು ಕಾರಣವೇನು? ಹೇಳು' ಎಂದನು. ಆಗ ಕನಕಲತೆಯು ಕೈಮುಗಿದು ಹೇಳುತ್ತಾಳೆ:—

"ಅವಂತೀದೇಶದಲ್ಲಿರುವ ಉಜ್ಜಯಿನೀ ನಗರದಲ್ಲಿ ನರಪಾಲನೆಂಬ ದೊರೆಯು ದೊರೆತನವನ್ನು ಮಾಡುತ್ತಿದ್ದಾನೆ. ಮದನವೇಗೆಯೆಂಬುವಳು ಆತನ ಪಟ್ಟಮಹಿಷಿ. ಮದನದೇವನೆಂಬುವನು ದೊರೆಯ ಮಂತ್ರಿ. ಸೋಮೆಯೆಂಬುವಳು ಆತನ ಹೆಂಡತಿ. ಸಮುದ್ರದತ್ತನೆಂಬುವನು ರಾಜಶ್ರೇಷ್ಠಿ.

ಆತನ ಪತ್ನಿ ಸಾಗರದತ್ತೆ. ಆ ಶ್ರೇಷ್ಠಿದಂಪತಿಗಳಿಗೆ ಉಮಯನೆಂಬ ಪುತ್ರನೂ ಜಿನದತ್ತೆಯೆಂಬ ಪುತ್ರಿಯೂ ಇರುತ್ತಾರೆ. ಆ ಜಿನದತ್ತೆಯನ್ನು ಕೌಶಾಂಬೀ ನಗರದಲ್ಲಿ ಉತ್ತಮ ಶ್ರಾವಕನಾಗಿರುವ ಜಿನದತ್ತನೆಂಬವನಿಗೆ ಮದುವೆಮಾಡಿ ಕೊಟ್ಟರು. ಆಕೆಯು ಪರಮಪತಿವ್ರತೆಯೂ ಧಾರ್ಮಿಕಳೂ ಆಗಿರುತ್ತಾಳೆ. ಇತ್ತ ಉಮಯನು ದ್ಯೂತಾದಿ ಸಪ್ತವ್ಯಸನಪರಾಯಣನಾದನು. ತಂದೆ ತಾಯಿಗಳು ಬಹಳವಾಗಿ ಬುದ್ಧಿವಾದಗಳನ್ನು ಹೇಳಿದರೂ ತನ್ನ ದುರ್ವ್ಯಸನವನ್ನು ಬಿಡಲಿಲ್ಲ. ಪೂರ್ವಾರ್ಜಿತಕರ್ಮವನ್ನು ಮೀರಲು ಯಾರಿಂದ ಸಾಧ್ಯ? ಉಮಯನು ಪ್ರತಿದಿವಸ ಪಟ್ಟಣದಲ್ಲಿ ಕಳ್ಳತನವನ್ನು ಮಾಡುತ್ತಿದ್ದನು. ಹೀಗೆ ಉಮಯನು ಕಳುವು ಮಾಡುತ್ತಿರುವುದನ್ನು ಯಮದಂಡನೆಂಬ ತಳವಾರನು ರಾತ್ರಿಯಲ್ಲಿ ಹಲವು ಸರ್ತಿ ಕಂಡರೂ ಸಮುದ್ರದತ್ತಶ್ರೇಷ್ಠಿಯ ಗೌರವ ಸೌಜನ್ಯಗಳ ಕಡೆಗೆ ದೃಷ್ಟಿಯಿಟ್ಟು, ಉಮಯನನ್ನು ಬಿಟ್ಟನು. ಯಮದಂಡನು ತನ್ನ ಮನಸ್ಸಿನಲ್ಲಿ ವಿಚಾರಮಾಡುತ್ತಾನೆ–'ಆಹಾ! ಒಂದು ಗರ್ಭದಿಂದ ಜನಿಸಿದವರೆಲ್ಲರೂ ಸಮಾನರಾಗಿರುವುದಿಲ್ಲ. ಜಿನದತ್ತೆಯು ಧಾರ್ಮಿಕಳೂ ಪತಿವ್ರತೆಯೂ ಆಗಿರುತ್ತಾಳೆ. ಈ ಉಮಯನು ಮಹಾಪಾಪಿಯಾಗಿದ್ದಾನೆ.'

ಒಂದಾನೊಂದು ದಿವಸ ಯಮದಂಡನು ಉಮಯನನ್ನು ಹಿಡಿದೊಯ್ದು ರಾಜನ ಮುಂದೆ ನಿಲ್ಲಿಸಿ 'ದೇವ! ಈತನು ರಾಜಶ್ರೇಷ್ಠಿಯಾದ ಸಮುದ್ರದತ್ತನ ಮಗ. ಉಮಯನೆಂದು ಈತನ ಹೆಸರು. ಹಲವು ಸರ್ತಿ ಎಚ್ಚರಿಸಿದರೂ ಈತನು ಕಳ್ಳತನವನ್ನು ಬಿಡುವುದಿಲ್ಲ. ಈಗ ಸ್ವಾಮಿಯ ಚಿತ್ತಕ್ಕೆ ತೋರಿದಂತೆ ಮಾಡಬಹುದು.

ಸರ್ವದೇವಮಯಸ್ಯಾಪಿ ವಿಶೇಷೋ ಭೂಪತೇರಯಂ।
ಶುಭಾಶುಭಫಲಂ ಸದ್ಯೋ ನೃಪಾದ್ದೇವಾದ್ಭವಾಂತರೇ ॥

—ಸರ್ವದೇವಸ್ವರೂಪನಾದ ರಾಜನಿಗೂ ದೇವರಿಗೂ ಇರುವ ವಿಶೇಷವೇನೆಂದರೆ–ರಾಜನಿಂದ ಶುಭಾಶುಭಫಲಗಳು ತತ್ಕ್ಷಣದಲ್ಲಿ ಉಂಟಾಗುತ್ತವೆ. ದೇವರಿಂದ ಆ ಫಲಗಳು ಭವಾಂತರದಲ್ಲಿ ಉಂಟಾಗುತ್ತವೆ'. ಎಂದು ವಿಜ್ಞಾಪಿಸಿದನು.

ದೊರೆಯು ತನ್ನ ಮನಸ್ಸಿನಲ್ಲಿ ವಿಚಾರಮಾಡುತ್ತಾನೆ—'ಸಮುದ್ರ ದತ್ತನ ಯಾವ ಗುಣವೂ ಈತನಲ್ಲಿಲ್ಲದಿರುವಾಗ, ಇವನು ಅವನ ಮಗನೆಂದು ಆಣೆಯಿಟ್ಟು ಹೇಳಿದ ಹೊರತು, ಅವನ ಮಗನೆನ್ನಿಸಿಕೊಳ್ಳಲು ಹೇಗೆ ಯೋಗ್ಯ ನಾಗುತ್ತಾನೆ?

ನ ವ್ಲಾಪಿತಾನ್ಯಖಿಲಧಾಮವತಾಂ ಮಹಾಂಸಿ ನಾಸ್ತಂ ತಮೋ ನ
ಚ ಕೃತಾ ಭುವನೋಪಕಾರಾಃ ।
ಸೂರ್ಯಾತ್ಮಜೋಽಹಮಿತಿ ಕೇನ ಗುಣೇನ ಲೋಕಾನ್
ಪ್ರತ್ಯಾಯಯಿಷ್ಯಸಿ ಶನೇ ! ಶಪಥೈರ್ವಿನಾ ತ್ವಂ ॥

—ಎಲೈ ಶನಿಯೇ ! ನೀನು ಸಮಸ್ತ ತೇಜೋವಸ್ತುಗಳ ತೇಜಸ್ಸುಗಳನ್ನು ಮಲಿನಮಾಡಿಲ್ಲ. ಕತ್ತಲೆಯನ್ನು ಹೋಗಲಾಡಿಸಿಲ್ಲ. ಲೋಕಕ್ಕೆ ಉಪಕಾರ ಗಳನ್ನು ಮಾಡಿಲ್ಲ. ಹೀಗಿರುವಾಗ ತಾನು ಸೂರ್ಯನ ಮಗನೆಂದು, ಆಣೆ ಗಳನ್ನು ಇಟ್ಟು ಹೇಳಿದ ಹೊರತು, ಯಾವ ಗುಣದಿಂದ ನೀನು ಜನರಿಗೆ ನಂಬಿಕೆಯನ್ನುಂಟುಮಾಡುವೆ ?

ಅನನ್ಯಸಾಧಾರಣಸೌರಭಾನ್ವಿತಂ ದಧಾನಮಪ್ಯುಜ್ಜ್ವಲ-
ಪುಷ್ಪಸಂಚಯಂ ।
ನ ಚಂಪಕಂ ಭೃಂಗಗಣಾಃ ಸಿಷೇವಿರೇ ಕಥಂ ಸುಗಂಧೇ
ಮಲಿನಾತ್ಮನಾಂ ರತಿಃ ॥

— ಇತರ ವಸ್ತುಗಳಲ್ಲಿ ಸಾಧಾರಣವಲ್ಲದ-ಅಸಾಧಾರಣವಾದ ಪರಿಮಳದಿಂದ ಕೂಡಿರುವುದೂ ಪ್ರಕಾಶಮಾನವಾದ ಪುಷ್ಪಗಳ ಸಮೂಹವನ್ನು ಧರಿಸಿರು ವುದೂ ಆದ ಸಂಪಿಗೆಯ ಮರವನ್ನು ದುಂಬಿಗಳು ಸೇರುವುದಿಲ್ಲ. ಮಲಿನವಾದ ಸ್ವಭಾವವುಳ್ಳವರಿಗೆ ಪರಿಮಳದಲ್ಲಿ ಪ್ರೀತಿಯು ಹೇಗಾಗುವುದು ?'

ಬಳಿಕ ದೊರೆಯು ಸಮುದ್ರದತ್ತನನ್ನು ಕರೆಯಿಸಿ 'ಎಲೈ ಸಮುದ್ರ ದತ್ತನೇ ! ಈ ದುಷ್ಟನನ್ನು ನಿನ್ನ ಮನೆಯಿಂದ ಓಡಿಸಿಬಿಡು. ಹಾಗೆ ಮಾಡ ದಿದ್ದರೆ ನಿನ್ನ ಮಾನವೂ ಹೋಗುವುದು.

ದುರ್ಜನಜನಸಂಸರ್ಗೇ ಸಾಧುಜನಸ್ಯಾಪಿ ದೋಷ ಆಯಾತಿ ॥
ದಶಮುಖಕೃತಾಪರಾಧೇ ಜಲಧಿರ್ಗಂಭೀರಬಂಧನಂ ಪ್ರಾಪ್ತಃ ॥

—ದುರ್ಜನರ ಸಹವಾಸದಲ್ಲಿ ಸಜ್ಜನರಿಗೂ ದೋಷವು ಬರುವುದು. ದಶ ಮುಖ ರಾವಣನು ಮಾಡಿದ ತಪ್ಪಿನಿಂದ ಸಮುದ್ರವು ಆಳವಾದ ಬಂಧನವನ್ನು ಹೊಂದಿತು.

ಸರ್ವದಾನಿಷ್ಟನೈಕಟ್ಯಂ ವಿಪದೇ ವೃತ್ತಶಾಲಿನಾಂ ।
ವಾರಿಹಾರಿಘಟೀಪಾರ್ಶ್ವೇ ತಾಡ್ಯತೇ ಪಶ್ಯ ಝಲ್ಲರೀ ॥

—ಯಾವಾಗಲೂ ಅನಿಷ್ಟವಸ್ತುವಿನ ಸಾಮೀಪ್ಯವು ದುಂಡಾಗಿರುವ ವಸ್ತು ಗಳಿಗೆ, ವ್ರತಸ್ಥರಿಗೆ ವಿಪತ್ತಿಗೆ ಕಾರಣವಾಗುವುದು. ಸಮಯವನ್ನು ತಿಳಿಸುವ ಜಲಪಾತ್ರೆಯ ಸಮೀಪದಲ್ಲಿರುವ ಘಂಟೆಯು ಹೊಡೆಯಲ್ಪಡುತ್ತದೆ.' (ಗಡಿ ಯಾರದ ಸಮೀಪದಲ್ಲಿರುವ ದುಂಡಾದ ಘಂಟೆಯು ಸಮಯವನ್ನು ತಿಳಿಸುವುದ ಕ್ಕೋಸ್ಕರ ಹೊಡೆಯಲ್ಪಡುವುದು).

ದೊರೆಯ ಮಾತನ್ನು ಕೇಳಿ ಸಮುದ್ರದತ್ತಶ್ರೇಷ್ಠಿಯು ದುಃಖಿತನಾಗಿ, ತನ್ನ ಮನೆಗೆ ಹೋಗಿ ಹೆಂಡತಿಯನ್ನು ಕರೆದು 'ಎಲೌ ಪತ್ನಿಯೇ ! ನಮ್ಮ ಕುಲಕಲಂಕನಾದ ಈ ಉಮಯನನ್ನು ಮನೆಯಿಂದ ಹೊರಕ್ಕೆ ಹಾಕಬೇಕು. ಹಾಗೆ ಮಾಡದಿದ್ದರೆ ಅನರ್ಥವಾಗುವುದು.

ಉತ್ಕೋಚಂ ಪ್ರೀತಿದಾನಂ ಚ ದ್ಯೂತದ್ರವ್ಯಂ ಸುಭಾಷಿತಂ ।
ಚೋರಸ್ಯಾರ್ಥವಿಭಾಗಂ ಚ ಸದ್ಯೋ ಜಾನಾತಿ ಪಂಡಿತಃ ॥

—ವಿದ್ವಾಂಸನು ಲಂಚವನ್ನೂ ಪ್ರೀತಿಪುರಸ್ಸರವಾದ ದಾನವನ್ನೂ ಜೂಜಿನ ದ್ರವ್ಯವನ್ನೂ ಒಳ್ಳೆಯ ಮಾತನ್ನೂ ಕಳ್ಳನ ದ್ರವ್ಯದ ವಿಭಾಗವನ್ನೂ ಬಹು ಶೀಘ್ರವಾಗಿ ತಿಳಿಯುತ್ತಾನೆ.

ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ।
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥

—ವಂಶರಕ್ಷಣೆಗಾಗಿ ಒಬ್ಬ ಮನುಷ್ಯನನ್ನು ಬಿಡಬೇಕು. ಗ್ರಾಮರಕ್ಷಣೆ ಗಾಗಿ ಒಂದು ವಂಶವನ್ನು ಬಿಡಬೇಕು. ದೇಶರಕ್ಷಣೆಗಾಗಿ ಗ್ರಾಮವನ್ನು ಬಿಡ ಬೇಕು. ಆತ್ಮರಕ್ಷಣೆಗಾಗಿ ಪೃಥಿವೀ-ದೇಶವನ್ನು ಬಿಡಬೇಕು'. ಎಂದು ಹೇಳಿ

ಉಮಯನನ್ನು ಮನೆಯಿಂದ ಹೊರಕ್ಕೆ ಹಾಕಿದನು. ಅದರಿಂದ ಉಮಯನ ತಾಯಿಯು ದುಃಖಿತಳಾಗಿ ಹೇಳುತ್ತಾಳೆ–

ಜಲನಿಧಿಪರತಟಗತಮಪಿ ಕರತಲಮಾಯಾತಿ ಯಸ್ಯ ಭವಿತವ್ಯಂ ।
ಕರತಲಗತಮಪಿ ನಶ್ಯತಿ ಯಸ್ಯ ಚ ಭವಿತವ್ಯತಾ ನಾಸ್ತಿ ॥

—ಭವಿತವ್ಯವಿದ್ದರೆ ಸಮುದ್ರದ ಆಚೆಯ ದಡದಲ್ಲಿರುವ ವಸ್ತುವೂ ಕೈಗೆ ಬರುವುದು. ಭವಿತವ್ಯತೆಯಿಲ್ಲದಿದ್ದರೆ ಅಂಗೈಯಲ್ಲಿರುವ ವಸ್ತುವೂ ನಾಶವಾಗುವುದು. ಅದೃಷ್ಟ-ಪುಣ್ಯವಿದ್ದರೆ ದೂರದಲ್ಲಿರುವ ವಸ್ತುವೂ ಕೈಸೇರುವುದೆಂದೂ ಅದಿಲ್ಲದಿದ್ದರೆ ಕೈಯಲ್ಲಿರುವ ವಸ್ತುವೂ ದೂರಸಾಗುವುದೆಂದೂ ಭಾವವು.'

ಅನಂತರದಲ್ಲಿ ಉಮಯನು ಹೊರಟು ಓರ್ವ ವರ್ತಕನೊಡನೆ ಕೌಶಾಂಬಿಗೆ ತನ್ನ ಸಹೋದರಿಯ ಬಳಿಗೆ ಹೋದನು. ಅವನು ಹೋಗುವುದರೊಳಗಾಗಿ ಅವನ ಸಮಾಚಾರವು ಅಲ್ಲಿ ಹರಡಿತ್ತು. ಜಿನದತ್ತೆಯು ತನ್ನ ಅಣ್ಣ ಉಮಯನನ್ನು ನೋಡಿ, ಅವನ ದುರ್ವಾರ್ತೆಯನ್ನು ಕೇಳಿ, ಅವನಲ್ಲಿ ಆ ಬಂಧುಪ್ರೇಮವನ್ನು ತೋರಿಸಲಿಲ್ಲ.

ವಾರ್ತಾ ಚ ಕೌತುಕವತೀ ವಿಶದಾ ಚ ವಿದ್ಯಾ ಲೋಕೋತ್ತರಃ
ಪರಿಮಲಶ್ಚ ಕುರಂಗನಾಭೇಃ ।
ತೈಲಸ್ಯ ಬಿಂದುರಿವ ವಾರಿಣಿ ದುರ್ನಿವಾರ-ಮೇತತ್ತ್ರಯಂ
ಪ್ರಸರತೀತಿ ಕಿಮತ್ರ ಚಿತ್ರಂ ॥

—ಕುತೂಹಲವನ್ನುಂಟುಮಾಡುವ ಸಮಾಚಾರ, ಉತ್ತಮವಾದ ವಿದ್ಯೆ, ಕಸ್ತೂರಿಯ ಲೋಕೋತ್ತರವಾದ ಪರಿಮಳ ಇವು ಮೂರು, ನೀರಿನ ಮೇಲೆ ಎಣ್ಣೆಯ ತೊಟ್ಟಿನಂತೆ, ತಡೆಯಿಲ್ಲದೆ ಹರಡುವುದರಲ್ಲಿ ಆಶ್ಚರ್ಯವೇನಿದೆ? ಈ ಮೂರು ವಿಷಯಗಳು ಬಹುಶೀಘ್ರವಾಗಿ ಹರಡುತ್ತವೆಂದು ಭಾವವು.

ಸಹೋದರಿಯಿಂದ ಉಪೇಕ್ಷಿಸಲ್ಪಟ್ಟ ಉಮಯನು ಹೇಳುತ್ತಾನೆ–
'ನಾನು ಅದೃಷ್ಟಹೀನನು. ಇಲ್ಲಿಯೂ ನನಗೆ ಎಡರು ತಪ್ಪುವುದಿಲ್ಲ.

ಖಲ್ವಾಟೋ ದಿವಸೇಶ್ವರಸ್ಯ ಕಿರಣೈಃ ಸಂತಾಪಿತೋಮಸ್ತಕೇ ।
ಛಾಯಾರ್ಥಂ ಸಮುಪೈತಿ ಸತ್ವರಮಸೌ ತಾಲಸ್ಯ ಮೂಲಂ ತತಃ ॥
ತತ್ರೋಚ್ಚೈರ್ಮಹತಾ ಫಲೇನ ಪತತಾ ಭಗ್ನಂ ಸಶಬ್ದಂ ಶಿರಃ ।
ಪ್ರಾಯೋ ಗಚ್ಛತಿ ಯತ್ರ ಭಾಗ್ಯರಹಿತಸ್ತತ್ರಾಪದಾಮಾಸ್ಪದಂ ॥

—ಬೋಳುತಲೆಯ ಮನುಷ್ಯನು ಸೂರ್ಯನ ಕಿರಣಗಳಿಂದ ತಲೆಯ ಮೇಲೆ ಸಂತಾಪವನ್ನು ಹೊಂದಿದವನಾಗಿ ಬಳಿಕ ನೆರಳಿಗೋಸ್ಕರ ಶೀಘ್ರವಾಗಿ ತಾಳೆಯ ಮರದ ಬುಡಕ್ಕೆ ಹೋಗುತ್ತಾನೆ. ಅಲ್ಲಿ ಎತ್ತರದಿಂದ ಅವನ ತಲೆಯ ಮೇಲೆ ಬಿದ್ದ ತಾಳೆಯ ಫಲದಿಂದ ತಲೆಯು ಸೀಳಿತು. ಶಬ್ದವಾಯಿತು. ಅದೃಷ್ಟಹೀನನು ಹೋದಲ್ಲೆಲ್ಲಾ ಪ್ರಾಯಿಕವಾಗಿ ಕಷ್ಟಗಳಿಗೀಡಾಗುತ್ತಾನೆ.

ಕೈವರ್ತಕರ್ಕಶಕರಗ್ರಹಣಚ್ಯುತೋಽಪಿ ಜಾಲೇ ಪುನರ್ನಿಪತಿತಃ
ಶಫರೋ ವರಾಕಃ ।
ಜಾಲಾತ್ತತೋ ವಿಗಲಿತೋ ಗಿಲಿತೋ ಬಕೇನ ವಾಮೇ ವಿಧೌ ಬತ
ಕುತೋ ವ್ಯಸನಾನ್ನಿವೃತ್ತಿಃ ॥

—ಶೋಚನೀಯವಾದ ಮತ್ಸ್ಯವು ಬೆಸ್ತನ ಒರಟಾದ ಕೈಯಿಂದ ಜಾರಿ ತಪ್ಪಿಸಿಕೊಂಡರೂ ಮತ್ತೆ ಬಲೆಯಲ್ಲಿ ಬಿದ್ದಿತು. ಬಳಿಕ ಆ ಬಲೆಯಿಂದ ತಪ್ಪಿಸಿಕೊಂಡರೂ ಬಕಪಕ್ಷಿಯು ಅದನ್ನು ನುಂಗಿತು. ವಿಧಿಯು ವಕ್ರವಾಗಿರುವಾಗ ವ್ಯಸನದಿಂದ ನಿವೃತ್ತಿಯಾಗುವುದು ಹೇಗೆ? ಕಷ್ಟ!

ವೈರಾಗ್ಯಪರಾಯಣನಾದ ಉಮಯನು ಮತ್ತೆ ತನ್ನ ಮನಸ್ಸಿನಲ್ಲಿ 'ಅಯ್ಯೋ! ನಿಜವಾಗಿಯೂ ಪರಾಶ್ರಯವು ಕಷ್ಟ!

ಉಡುಗಣಪರಿವಾರೋ ನಾಯಕೋಪ್ಯೌಷಧೀನಾಮಮೃತಮಯ–
ಶರೀರಃ ಕಾಂತಿಯುಕ್ತೋಽಪಿ ಚಂದ್ರಃ ।
ಭವತಿ ವಿಗತರಶ್ಮಿರ್ಮಂಡಲಂ ಪ್ರಾಪ್ಯ ಭಾನೋಃ ಪರಸದನನಿವಿಷ್ಟಃ
ಕೋ ನ ಧತ್ತೇ ಲಘುತ್ವಂ ॥

—ನಕ್ಷತ್ರಗಳ ಸಮೂಹವು ಪರಿವಾರವಾಗಿರುವವನೂ ಓಷಧಿಗಳಿಗೆ ಅಧಿಪತಿಯೂ ಅಮೃತಮಯವಾದ ಶರೀರವುಳ್ಳವನೂ ಆದ ಚಂದ್ರನು ಕಾಂತಿ

ಯುಕ್ತನಾಗಿದ್ದರೂ ಸೂರ್ಯನ ಮಂಡಲವನ್ನು ಹೊಂದಿ ಕಳೆಗುಂದಿದವನಾಗುತ್ತಾನೆ. ಪರಗೃಹದಲ್ಲಿ ವಾಸಮಾಡುವವನು ಯಾವನು ತಾನೇ ಲಾಘವವನ್ನು ಹೊಂದುವುದಿಲ್ಲ ?'

ಈ ಪ್ರಕಾರವಾಗಿ ವಿಚಾರಮಾಡಿ ಜಿನಮಂದಿರಕ್ಕೆ ಹೋಗಿ, ಶ್ರುತಸಾಗರರೆಂಬ ಮುನೀಶ್ವರರ ಬಳಿಯಲ್ಲಿ ಧರ್ಮಶ್ರವಣವನ್ನು ಮಾಡಿ, ಸಪ್ತವ್ಯಸನಗಳನ್ನು ಪರಿತ್ಯಜಿಸಿ, ಸಮ್ಯಕ್ತ್ವಪೂರ್ವಕವಾದ ಶ್ರಾವಕವ್ರತವನ್ನು ಪರಿಗ್ರಹಿಸಿ ಶ್ರಾವಕನಾದನು. ಹೆಸರು ಗೊತ್ತಿಲ್ಲದ ಫಲವನ್ನು ತಿನ್ನುವುದಿಲ್ಲವೆಂಬ ವ್ರತವನ್ನೂ ಮಾಡಿದನು. ನೋಡಿದಿರಾ ! ಹೇಗಿದ್ದವನು ಹೇಗಾದ ? ಆತ್ಮನ ಪರಿಣಾಮವು ವಿಲಕ್ಷಣವಾದುದು. ಯಾವಕಾಲದಲ್ಲಿ ಹೇಗೆ ಪರಿಣಾಮವು ಪರಿವರ್ತನೆಯಾಗುವುದೆಂದು ಹೇಳಲಾಗುವುದಿಲ್ಲ. ಪೂರ್ವಾರ್ಜಿತವಾದ ಶುಭಾಶುಭ ಕರ್ಮೋದಯದಿಂದ ದುಷ್ಟನಾಗಿದ್ದವನು ಶಿಷ್ಟನಾಗಿಯೂ ಶಿಷ್ಟನಾಗಿದ್ದವನು ದುಷ್ಟನಾಗಿಯೂ ಆಗುವುದುಂಟು. ಗುಣಹೀನರೂ ಗುಣವಂತರ ಸಂಸರ್ಗದಿಂದ ಗುಣವಂತರಾಗುವುದುಂಟು.

ಹೀಗೆ ಉಮಯನು ಸನ್ಮಾರ್ಗಗಾಮಿಯಾದುದನ್ನು ಕೇಳಿ, ಆತನ ಸಹೋದರಿಯು ಬಹಳ ಗೌರವದಿಂದ ಆತನನ್ನು ತನ್ನ ಮನೆಗೆ ಕರೆದುಕೊಂಡು ಬಂದು ಸತ್ಕರಿಸಿ, ಅವನಿಗೆ ಬಹುದ್ರವ್ಯವನ್ನು ಕೊಟ್ಟಳು.

ಯಾಂತಿ ನ್ಯಾಯಪ್ರವೃತ್ತಸ್ಯ ತಿರ್ಯಂಚೋಽಪಿ ಸಹಾಯತಾಂ ।
ಅಪಂಥಾನಂ ತು ಗಚ್ಛಂತಂ ಸೋದರೋಽಪಿ ವಿಮುಂಚತಿ ॥

—ನ್ಯಾಯಮಾರ್ಗದಲ್ಲಿರುವ ಮನುಷ್ಯನಿಗೆ ತಿರ್ಯಕ್ಪ್ರಾಣಿಗಳೂ ಸಹಾಯವನ್ನು ಮಾಡುತ್ತವೆ. ದುರ್ಮಾರ್ಗದಲ್ಲಿ ನಡೆಯುವ ಮನುಷ್ಯನನ್ನು ಸಹೋದರನೂ ತ್ಯಜಿಸುತ್ತಾನೆ.

ಪಾತಿತೋಽಪಿ ಕರಾಘಾತೈರುತ್ಪತತ್ಯೇವ ಕಂದುಕಃ ॥
ಪ್ರಾಯೇಣ ಸಾಧುವೃತ್ತಾನಾಮಸ್ಥಾಯಿನ್ಯೋ ವಿಪತ್ತಯಃ ॥

—ಕೈಯ ಹೊಡೆತಗಳಿಂದ ರಬ್ಬರಿನ ಚೆಂಡು ಕೆಳಕ್ಕೆ ಬೀಳಿಸಲ್ಪಟ್ಟರೂ ಮೇಲಕ್ಕೆ ಹಾರುತ್ತದೆ. ಸದಾಚಾರಿಗಳಿಗೆ ಪ್ರಾಪ್ತವಾದ ವಿಪತ್ತುಗಳು

ಪ್ರಾಯಿಕವಾಗಿ ಸ್ಥಿರವಾಗಿರುವುದಿಲ್ಲ. ಸದಾಚಾರಿಗಳು ಒಂದು ಕಾಲದಲ್ಲಿ ವಿಪತ್ತುಗಳಿಂದ ಕುಗ್ಗಿದರೂ ಮತ್ತೊಂದು ಕಾಲದಲ್ಲಿ ಉನ್ನತಿಯನ್ನು ಹೊಂದುವರೆಂದು ಭಾವವು.

ಹೀಗೆ ಉಮಯನು ತಂಗಿಯ ಮನೆಯಲ್ಲಿ ಸುಖವಾಗಿದ್ದಾನೆ. ಒಂದಾನೊಂದು ದಿವಸ ಉಜ್ಜಯಿನೀನಗರದಿಂದ ಕೆಲವರು ವರ್ತಕರು ಕೌಶಾಂಬಿಗೆ ಬಂದರು. ಅವರು ಸನ್ಮಾರ್ಗಗಾಮಿಯಾಗಿರುವ ಉಮಯನನ್ನು ಕಂಡು ಆಶ್ಚರ್ಯಗೊಂಡು 'ನೀನು ಧನ್ಯನಾದೆ. ನೀನು ಉತ್ತಮರ ಸಹವಾಸದಿಂದ ಉತ್ತಮನಾದೆ' ಎಂದು ಅನೇಕವಿಧವಾಗಿ ಪ್ರಶಂಸಿದರು.

ಯಥಾ ಚಂದ್ರಂ ವಿನಾ ರಾತ್ರಿಃ ಕಮಲೇನ ಸರೋವರಂ ।
ತಥಾ ನ ಶೋಭತೇ ಜೀವೋ ವಿನಾ ಧರ್ಮೇಣ ಸರ್ವದಾ ॥

—ಚಂದ್ರನಿಲ್ಲದಿದ್ದರೆ ರಾತ್ರಿಯೂ ಕಮಲವಿಲ್ಲದಿದ್ದರೆ ಸರೋವರವೂ ಹೇಗೆ ಶೋಭಿಸುವುದಿಲ್ಲವೋ ಹಾಗೆ ಜೀವನಿಗೆ ಧರ್ಮವಿಲ್ಲದಿದ್ದರೆ ಎಂದೂ ಶೋಭೆಯಿಲ್ಲ.

ಅನಂತರದಲ್ಲಿ ಉಮಯನು ಮಾರುವುದಕ್ಕೆ ಯೋಗ್ಯವಾದ ಅನೇಕವಸ್ತುಗಳನ್ನು ತೆಗೆದುಕೊಂಡು ಆ ವರ್ತಕರೊಡನೆ ತನ್ನ ಊರಿಗೆ ಹೊರಟುಹೋಗುತ್ತಿರುವಾಗ ರಾತ್ರಿಯಲ್ಲಿ ದಾರಿತಪ್ಪಿ ದೊಡ್ಡಕಾಡನ್ನು ಹೊಕ್ಕನು. ಮರುದಿವಸ ಪ್ರಾತಃಕಾಲದಲ್ಲಿ ಅವನ ಸಂಗಡಿಗರು ಹೊಟ್ಟೆ ಹಸಿವನ್ನು ಸಹಿಸಲಾರದೆ, ನೋಟಕ್ಕೆ ಚೆನ್ನಾಗಿರುವ ರುಚಿಯಾದ ವಿಷಫಲಗಳನ್ನು ಕೊಯ್ದು ತಿಂದು, ಉಮಯನಿಗೆ ಕೆಲವು ಫಲಗಳನ್ನು ಕೊಟ್ಟರು. ಅವನು 'ಈ ಫಲಗಳ ಹೆಸರೇನು ?' ಎಂದು ಕೇಳಿದನು. ಅದಕ್ಕವರು 'ಹೆಸರಿಂದೇನು ? ಕಹಿಯಾದ, ದುರ್ಗಂಧವಾದ ಮತ್ತು ರುಚಿಯಿಲ್ಲದ ಫಲಗಳನ್ನು ಬಿಟ್ಟು, ಇಂತಹ ಫಲಗಳನ್ನು ತಿಂದು, ಪ್ರಾಣಗಳನ್ನು ಕಾಪಾಡಿಕೋ' ಎಂದರು. ಆ ಮಾತನ್ನು ಕೇಳಿ ಉಮಯನು 'ಹೆಸರುಗೊತ್ತಿಲ್ಲದ ಹಣ್ಣುಗಳನ್ನು ತಿನ್ನುವುದಿಲ್ಲವೆಂದು ನಾನು ವ್ರತವನ್ನು ಮಾಡಿರುವೆನು' ಎಂದು ಹೇಳಿ ಆ ಹಣ್ಣುಗಳನ್ನು ತಿನ್ನಲಿಲ್ಲ. ಸ್ವಲ್ಪ ಸಮಯದಲ್ಲಿ ಆ ಸಂಗಡಿಗರೆಲ್ಲರೂ ಮೂರ್ಛಿತರಾಗಿ ಭೂಮಿಯ ಮೇಲೆ ಬಿದ್ದರು. ಅವರನ್ನು ನೋಡಿ ಉಮಯನು 'ಆಹಾ ! ಈ ಹಣ್ಣುಗಳಲ್ಲಿ ಕಾಲಕೂಟ ವಿಷವಿರುವುದೆಂದು ಯಾರು ಬಲ್ಲರು ?' ಎಂದು ದುಃಖಿಸಿದನು.